ಕನ್ನಡ ನಾಡಿನ

ಧಾರ್ಮಿಕ ಪರಂಪರೆ



ಪ್ರೊ॥ ಎಸ್.ಕೆ.ರಾಮಚಂದ್ರ ರಾವ್

ಕನ್ನಡ ನಾಡಿನ

ಧಾರ್ಮಿಕ ಪರಂಪರೆ

ವಿದ್ಯಾಲಂಕಾರ ಪ್ರೊ॥ ಎಸ್. ಕೆ. ರಾಮಚಂದ್ರರಾವ್

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ನೃಪತುಂಗ ರಸ್ತೆ
ಬೆಂಗಳೂರು-೫೬೦ ೦೦೨

ಪ್ರೊ॥ ಎಸ್. ಕೆ. ರಾಮಚಂದ್ರರಾವ್ ಅವರಿಂದ ರಚಿಸಲ್ಪಟ್ಟ 'ಕನ್ನಡ ನಾಡಿನ ಧಾರ್ಮಿಕ ಪರಂಪರೆ' ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ (ಜನವರಿ ೧೯೮೩) ಐಬಿಎಚ್ ಪ್ರಕಾಶನ ದವರ ಕೃಪೆಯಿಂದ ಪ್ರಕಟಿಸಲ್ಪಟ್ಟಿದ್ದು.

KANNADA NADINA DHARMIKA PARAMPARE– (Religious Heritage of Karnataka)–written in Kannada by Prof. S.K. Ramachan dra Rao. Published by The Directorate of Kannada and Culture, Government of Karnataka, 14/3A Nrupathunga Road, Bangalore-560 002, on the occasion of the *FIRST WORLD KANNADA CONFERENCE (January 1983)* by the Courtesy of IBH Prakashana, Gandhinagar, Bangalore-560 009

© Copyright IBH Prakashana
Bangalore-560 009

ಬೆಲೆ ರೂ. ೨-೦೦

ಮುಖಪುಟ : ಮನಮೋಹನ್

ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ,
ಬೆಂಗಳೂರು-೫೬೦ ೦೦೯

೧

ಮೊದಲ ಮಾತು

ಕನ್ನಡ ನಾಡಿನ ಹಿರಿಮೆಗಳಲ್ಲಿ ಒಂದು ಎಂದರೆ ಭಾರತ ದೇಶದ ಎಲ್ಲ ಧರ್ಮಗಳೂ ಇಲ್ಲಿರುವುದು, ಇಲ್ಲಿ ಉಳಿದು ಬೆಳೆದು ಬಂದಿರುವುದು. ದೇಶದ ಇತರ ರಾಜ್ಯಗಳನ್ನು ಕುರಿತು ಇದೇ ಮಾತನ್ನು ಹೇಳುವ ಹಾಗಿಲ್ಲ. ನಮ್ಮ ನಾಡಿನ ನೆಲದ ಗುಣ, ನೀರಿನ ಗುಣ ಎನ್ನೋಣವೇ ? ಇತಿಹಾಸದ ಪ್ರಭಾವ ಎನ್ನೋಣವೇ ? ಎಲ್ಲದಕ್ಕಿಂತ ಮುಖ್ಯವಾಗಿ ನಮ್ಮ ಜನರ ವಿಶಾಲವಾದ ಮನೋಧರ್ಮ ಇದಕ್ಕೆ ಕಾರಣ. ನಮ್ಮವರು ಯಾವ ಧರ್ಮವನ್ನೂ ಕೀಳಾಗಿ ಕಾಣುವವರಲ್ಲ. 'ದೇವರಿಗೆ ನೂರು ರೂಪಗಳು. ದೇವರನ್ನು ಸೇರಲು ಸಾವಿರ ದಾರಿಗಳು' ಎಂದು ದಿಟವಾಗಿ ನಂಬಿದವರು.

ಇಲ್ಲಿ ಆಳಿದ ಅರಸರೂ ಇದೇ ಮನೋಧರ್ಮವನ್ನು ಎತ್ತಿಹಿಡಿದರು. ತಮ್ಮ ಧರ್ಮ ಯಾವುದೇ ಇರಲಿ, ಪ್ರಜೆಗಳಿಗೆಲ್ಲ ಒಪ್ಪಿಗೆಯಾದ ಎಲ್ಲ ಧರ್ಮಗಳಿಗೂ ಪ್ರೋತ್ಸಾಹ ಕೊಡುತ್ತಿದ್ದರು. ಎಲ್ಲ ಧರ್ಮಗಳನ್ನೂ ಸಮವಾಗಿ ಕಾಣುವ ನೀತಿ ಅವರದ್ದು. ಉದಾಹರಣೆಗೆ, ಬಳ್ಳಿಗಾವೆಯ ಹೆಸರನ್ನು ನೀವು ಕೇಳಿದ್ದೀರಲ್ಲವೆ ? ಕನ್ನಡ ನಾಡಿನಲ್ಲಿ ಒಂದು ಕಾಲಕ್ಕೆ ಸುಪ್ರಸಿದ್ಧವಾದ, ಮುಖ್ಯವಾದ ನಗರವಾಗಿದ್ದಿತು ಅದು. ಅಲ್ಲಿ ಧರ್ಮಗಳು ಹೇಗೆ ಒಟ್ಟಿಗೆ ಇದ್ದುವು ಎನ್ನುವುದನ್ನು ಕ್ರಿಸ್ತಾಬ್ದ ೧೧೫೮ರ ಶಾಸನವೊಂದು ತಿಳಿಸುತ್ತದೆ. ಶಾಸನದ ಮಾತು ಇದು–

ಹರಿ–ಹರ–ಕಮಲಾಸನ–ವೀತರಾಗ–ಬೌದ್ಧಾಲಯಗಳಿಂದಿನ
ವಸುಂಧರೆಗೆಸೆವ ಪಂಚಶರದಂತಿರೆ ಪಂಚಮತಂಗಳೆಸು–
ವುವಾ ಪಟ್ಟಣದೊಳ್

ಎಂದರೆ, ಅಲ್ಲಿ ವೈಷ್ಣವ, ಶೈವ, ಬ್ರಾಹ್ಮಣ, ಜೈನ, ಬೌದ್ಧಧರ್ಮ ಗಳೆಲ್ಲವೂ ಮೆರೆಯುತ್ತಿದ್ದುವು.

ತುಮಕೂರು ಜಿಲ್ಲೆಯ ಕೈದಾಳದ ಕ್ರಿಶ್ತಾಬ್ದ ೧೧೫೧ರ ಶಾಸನದಲ್ಲಿ ಈ ಕೆಳಗಿನ ಪ್ರಾರ್ಥನಾ ಪದ್ಯವಿದೆ–

ಜಯಂತಿ ಯಸ್ಯಾವದತೋಪಿ ಭಾರತೀ–
ವಿಭೂತಯಸ್ತೀರ್ಥ ಕೃತೋಪಿ ನೈಹಿ್ರತೇ (?)
ಶಿವಾಯ ಧಾತ್ರೇ ಸುಗತಾಯ ವಿಷ್ಣವೇ
ಜಿನಾಯ ತಸ್ಮೈ ಸಕಳಾತ್ಮನೇ ನಮಃ ॥

ಶಿವ, ಬ್ರಹ್ಮ, ಸುಗತ (ಬುದ್ಧ), ವಿಷ್ಣು, ಜಿನ ಇವೆಲ್ಲ ಪರಮಾತ್ಮನಿಗೆ ಬೇರೆ ಬೇರೆ ಹೆಸರುಗಳು ಎಂದು ಮೇಲಿನ ಶಾಸನದ ಪದ್ಯದಿಂದ ತಿಳಿದು ಬರುತ್ತದೆ.

ಹಾಗೆಯೇ ಬೇಲೂರಿನ ದೇವಾಲಯಕ್ಕೆ ಸಂಬಂಧಿಸಿದಂತೆ ಒಂದು ಶಾಸನವಿದೆ ; ಅದು ಹೊಯ್ಸಳ ರಾಜರ ಕಾಲದ್ದು. ಅದು ಒಂದು ಸಂಸ್ಕೃತ ಶ್ಲೋಕದಂತಿದ್ದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವುದೇ–

ಯಂ ಶೈವಾಃ ಸಮುಪಾಸತೇ ಶಿವ ಇತಿ
ಬ್ರಹ್ಮೇತಿ ವೇದಾಂತಿನಃ ।
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ
ಕರ್ತೇತಿ ನೈಯಾಯಿಕಾಃ ।
ಕರ್ತೇತಿ ನೈಯಾಯಿಕಾಃ ।
ಅರ್ಹನ್ನಿತ್ಯಥ ಜೈನಶಾಸನರತಾಃ
ಕರ್ಮೇತಿ ಮೀಮಾಂಸಕಾಃ–
ಸೋಽಯಂಪೋ ವಿದಧಾತು ವಾಂಛಿತಫಲಂ
ತ್ರೈಲೋಕ್ಯನಾಥೋ ವಿಭುಃ ॥

ಎಂದರೆ, ಶೈವರು ಶಿವನೆನ್ನಲಿ, ವೇದಾಂತಿಗಳು ಬ್ರಹ್ಮನೆನ್ನಲಿ, ಬೌದ್ಧರು ಬುದ್ಧನೆನ್ನಲಿ, ನೈಯಾಯಿಕರು ಕರ್ತನೆನ್ನಲಿ, ಜೈನರು ಅರ್ಹನ್ ಎನ್ನಲಿ, ಮೀಮಾಂಸಕರು ಕರ್ಮವೆನ್ನಲಿ–ದೇವರು ಒಬ್ಬನೇ, ಎಲ್ಲರನ್ನೂ ಕಾಪಾಡುವವನು ಅವನೇ.

ಇದು ಕನ್ನಡ ನಾಡಿನಲ್ಲಿ ಮೊದಲಿನಿಂದಲೂ ಬೇರೂರಿಬಂದ ಭಾವನೆ. ರಾಜರೂ, ಜನಸಾಮಾನ್ಯರೂ ಧರ್ಮಕ್ಕೆಂದು ಕಾದಾಡಿದವರಲ್ಲ, ಮತವನ್ನು

ಹಿಡಿದು ಛಲವನ್ನು ಸಾಧಿಸಿದವರಲ್ಲ. ಯಾವೊಂದು ಧರ್ಮದ ಕೈಮೇಲಾಗಿದ್ದಾಗಲೂ ಉಳಿದ ಧರ್ಮಗಳಿಗೆ ಯಾವ ಬಗೆಯ ಆತಂಕವೂ ಒದಗುತ್ತಿರಲಿಲ್ಲ. ಇಷ್ಟು ಮಾತ್ರವಲ್ಲ, ಹೊರನಾಡಿನ ಧರ್ಮಗಳು ಅಲ್ಲಲ್ಲಿ ಆಸರೆ ತಪ್ಪಿ, ಉಪದ್ರವ ಹೆಚ್ಚಿ, ಧರ್ಮಗುರುಗಳು ಅಲೆದಾಡಬೇಕಾದ ಸಂದರ್ಭ ಬಂದಾಗ ಕನ್ನಡ ನಾಡು ಅವರಿಗೆ ಆಸರೆ ಕೊಟ್ಟು, ಆದರಿಸಿದ ನಿದರ್ಶನಗಳು ಹಲವಾರು ಇವೆ. ಶ್ರೀ ವೈಷ್ಣವ ಪಂಥದ ಆಚಾರ್ಯರಾದ ರಾಮಾನುಜಾಚಾರ್ಯರು ತಮಿಳು ನಾಡಿನವರು ; ಚೋಳರಾಜರ ಮೇಲಾಟವಿದ್ದಾಗ ಶೈವಧರ್ಮ ಪ್ರಬಲವಾಗಿ ಅಲ್ಲಿ ವೈಷ್ಣವರಿಗೆ ಉಳಿಗಾಲವಿಲ್ಲವಾಯಿತು. ರಾಮಾನುಜಾಚಾರ್ಯರ ಜೀವಕ್ಕೇ ಗಂಡಾಂತರ ಒದಗಿ ಅವರು ತಲೆತಪ್ಪಿಸಿಕೊಂಡು ತಮಿಳು ನಾಡಿನಿಂದ ಹೊರಬರಬೇಕಾಯಿತು. ಆಗ ಅವರು ಬಂದದ್ದು ಕನ್ನಡ ನಾಡಿಗೆ. ಇಲ್ಲಿನವರು ಅವರನ್ನು ತುಂಬ ಆದರದಿಂದ ಬರಮಾಡಿಕೊಂಡು, ಹತ್ತಾರು ವರ್ಷ ಅವರನ್ನು ಇಲ್ಲಿಯೇ ಉಳಿಸಿಕೊಂಡು ಇಲ್ಲಿ ಅವರ ಪಂಥ ಬೆಳೆಯುವಂತೆ ಮಾಡಿದರು. ತಮಿಳು ನಾಡು ವೈಷ್ಣವರಿಗೆ ಸುರಕ್ಷಿತವೆನಿಸಿದಾಗ ಆಚಾರ್ಯರನ್ನು ಅಲ್ಲಿಗೆ ಕಳುಹಿಸಿಕೊಟ್ಟರು.

ಕನ್ನಡ ನಾಡಿನ ಧಾರ್ಮಿಕ ಪರಂಪರೆಯ ಇನ್ನೊಂದು ಲಕ್ಷಣವೆಂದರೆ ಗುಣಗ್ರಹಣ. ತಮ್ಮವರು, ಬೇರೆಯವರು ಎನ್ನುವ ಭೇದಭಾವನೆ ಇಲ್ಲದೆ, ಹಿರಿಯರು ಎಲ್ಲಿಂದಲಾದರೂ ಬರಲಿ ಅವರನ್ನು ಸನ್ಮಾನಿಸಿ ಅವರಿಗೆ ನೆಲೆಮಾಡಿಕೊಡುವ ಔದಾರ್ಯ ಈ ಜನದ್ದು. ಶಂಕರಾಚಾರ್ಯರು ಕೇರಳದವರು ; ಆದರೆ ಅವರು ದಕ್ಷಿಣ ಭಾರತದಲ್ಲೊಂದು ಅಮ್ನಾಯಪೀಠ ಏರ್ಪಡಿಸಿಕೊಳ್ಳಬೇಕೆಂದಾಗ ಅವರು ಆರಿಸಿಕೊಂಡ ಸ್ಥಳ ಶೃಂಗೇರಿ ; ಕನ್ನಡನಾಡಿನಲ್ಲಿ ವಿಜಯನಗರದ ಅರಸರು ಇದನ್ನು ಉಳಿಸಿ, ಬೆಳೆಸಿದರು. ಅದ್ವೈತ ದರ್ಶನವನ್ನು ಕನ್ನಡದ ಜನ ಆದರಿಸಿದಂತೆ ಬೇರೆ ಯಾರೂ ಆದರಿಸಲಿಲ್ಲ. ಹೀಗೆಯೇ ನಾಥಪಂಥ, ಕಬೀರಪಂಥ, ನಾನಕಪಂಥ, ವಲ್ಲಭೀಯಪಂಥ, ಆರ್ಯಸಮಾಜ, ಬ್ರಾಹ್ಮಸಮಾಜ, ಥಿಯಾಸಫಿ, ಅರವಿಂದಪಂಥ, ಸಾಯಿಬಾಬಾಪಂಥ ಮೊದಲಾದ ಹತ್ತಾರು ಪಂಥಗಳು ಭಾರತ ದೇಶದ ಬೇರೆ ಬೇರೆ ಕಡೆಗಳಿಂದ ಕನ್ನಡ ನಾಡಿಗೆ ಬಂದು ಇಲ್ಲಿ ಬೆಳೆದಿವೆ.

ಈಗಲೂ ದೇಶದ ಸಾಧುಸಂತರೆಲ್ಲರ ಅನುಯಾಯಿಗಳನ್ನೂ ಕನ್ನಡ ನಾಡಿನಲ್ಲಿ ಕಾಣಬಹುದು. ಅವರವರ ಮತಪ್ರಚಾರವೂ ಯಾವ ಆತಂಕವಿಲ್ಲದೆ ನಡೆಯುತ್ತದೆ. ಧರ್ಮಪ್ರಸಾರಕ್ಕೆ ಪ್ರಾಂತೀಯ ಭಾವನೆ ಅಡ್ಡಿಯಾಗುವುದಿಲ್ಲ.

ಜನ ಅನಾಸಕ್ತರಾಗಿದ್ದುಕೊಂಡು ಬರಿದೆ ಅವಕಾಶ ಕೊಡುತ್ತಾರೆ ಅಷ್ಟೆ, ಎಂದು ಅರ್ಥವಲ್ಲ. ಆಸಕ್ತಿಯನ್ನೂ ವಹಿಸುತ್ತಾರೆ. ಈ ಎಲ್ಲ ಪಂಥಗಳನ್ನು ಕುರಿತು, ಅವರವರ ಬೋಧನೆಗಳನ್ನು ಕುರಿತು ಕನ್ನಡದಲ್ಲಿ ವಿಪುಲವಾದ ಸಾಹಿತ್ಯ ಬೆಳೆದಿದೆ ; ಸಂಸ್ಥೆಗಳು ಮೈದಳೆದಿವೆ.

ಈ ಕಾರಣಗಳಿಂದ ಕನ್ನಡ ನಾಡಿನ ಧಾರ್ಮಿಕ ಪರಂಪರೆಯಲ್ಲಿ ಒಂದು ವೈಶಿಷ್ಟ್ಯ ಮೂಡಿಬಂದಿದೆ, ಒಂದು ಸ್ವಾರಸ್ಯ ಒದಗಿಬಂದಿದೆ.

೨

ಜಾನಪದ ನೆಲೆ

ಕನ್ನಡ ನಾಡು ತುಂಬ ಪ್ರಾಚೀನವಾದ ಭೂಭಾಗ. ಇತಿಹಾಸ ಆರಂಭವಾಗಲು ಸಾವಿರಾರು ವರ್ಷಗಳ ಮೊದಲೇ ಇಲ್ಲಿ ಜನ ಇದ್ದರು ; ತಮಗೆ ವಿಶಿಷ್ಟವಾದ ಒಂದು ಸಂಸ್ಕೃತಿಯನ್ನೂ ಕಟ್ಟಿಕೊಂಡಿದ್ದರು. ಕಾಲಕ್ರಮೇಣ, ಹೊರಜಗತ್ತಿನ ಸಂಪರ್ಕ ಬೆಳೆದಂತೆ ಸಂಸ್ಕೃತಿಯ ವಿವರಗಳೂ ಹೆಚ್ಚಿದುವು, ಮೇರೆಗಳೂ ಬೆಳೆದುವು. ಈ ಸಂಪರ್ಕ ಮೂಡುವ ಮೊದಲು ಜನರ ಧಾರ್ಮಿಕ ನೆಲೆ ಹೇಗಿದ್ದಿತು ಎಂದು ಊಹಿಸಿಕೊಳ್ಳುವುದು ಕಷ್ಟ ; ಆದರೆ, ಈಗಲೂ ಹೊರಗಣ ಸಂಪರ್ಕದಲ್ಲಿ ಅಷ್ಟಾಗಿ ಸಿಕ್ಕಿಕೊಳ್ಳದೆ, ತಮ್ಮಷ್ಟಕ್ಕೆ ತಾವು, ಮಾರ್ಪಡದೆ, ಮೊದಲಿನಂತೆಯೇ ಉಳಿದುಬಂದಿರುವ ಕೆಲವು ಆದಿವಾಸಿ ಜನಾಂಗಗಳನ್ನು ನೋಡಿದರೆ ಈ ಮೊದಲ ನೆಲೆ ಕೊಂಚಮಟ್ಟಿಗೆ ಸ್ಪಷ್ಟವಾಗುತ್ತದೆ. ಇದನ್ನೇ ಪ್ರಾಚೀನ ನೆಲೆ ಎನ್ನಬಹುದು.

ಆದರೆ ಇದು ಹೀಗೆಯೇ ಉಳಿದುಕೊಂಡು ಬಂದಿರುವುದು ವಿರಳ. ಇಷ್ಟು ಮಾತ್ರ ಹೇಳಬಹುದು. ಈ ನೆಲೆಯಲ್ಲಿ ಜನ ಬೆಟ್ಟಗುಡ್ಡಗಳನ್ನೇ, ಹರಿಯುವ ನೀರನ್ನೇ, ಅಲೆದಾಡುವ ಕಾಡುಮೃಗಗಳನ್ನೇ, ಹಾರಾಡುವ ಹಕ್ಕಿಗಳನ್ನೇ ದೇವತೆಗಳೆಂದೋ ದೇವತೆಗಳ ದೂತರೆಂದೋ ಬಗೆದು, ಅವುಗಳ ಬಗ್ಗೆ ಭಯಭಕ್ತಿಗಳಿಂದ ನಡೆದುಕೊಳ್ಳುವರು. ಕಣ್ಣಿಗೆ ಕಾಣುವ ಒಂದೊಂದು ವಸ್ತುವಿನಲ್ಲೂ ಚೇತನವಿದೆಯೆಂದು ನಂಬಿ. ಗಿಡವಾಗಲೀ



ಬನವಾಸಿ ಮಧುಕೇಶ್ವರ ದೇವಾಲಯದಲ್ಲಿರುವ ನಾಗಪ್ರತಿಮೆ—ಕ್ರಿ.ಶ. ಎರಡನೆಯ ಶತಮಾನಕ್ಕೆ ಸೇರಿದ ಈ ನಾಗಪ್ರತಿಮೆಯನ್ನು ವಿಣ್ಹುಕಡ ಸಾತಕರ್ಣಿಯ ಮಗಳು ಶಿವಸ್ಕಂದ ನಾಗಶ್ರೀ ಮಾಡಿಸಿದ್ದು.

ಮರವಾಗಲೀ, ನೆಲವಾಗಲೀ ನೀರಾಗಲೀ, ಕಲ್ಲಾಗಲೀ ಮಣ್ಣಾಗಲೀ ಎಲ್ಲವೂ ಜೀವಂತವಾಗಿವೆಯೆಂದೇ ಅವರು ವರ್ತಿಸುವರು. ರಾತ್ರಿ ಮಲಗುವ ಮುನ್ನ, ಬೇಟೆಗೆ ಹೊರಡುವ ಮುನ್ನ, ಆಲೆತಕ್ಕೆ ತೊಡಗುವ ಮುನ್ನ, ರೋಗ ಕಾಡಿದಾಗ, ಮೋಡ ಕವಿದಾಗ, ಗುಡುಗು ಅಬ್ಬರಿಸಿದಾಗ ಅವರು ಈ ಚೇತನಗಳನ್ನು ವಶಪಡಿಸಿಕೊಳ್ಳುವುದು, ಅವುಗಳ ಕಾಟವನ್ನು ನಿಲ್ಲಿಸುವುದು ಮೊದಲಾದ ವಿಧಾನಗಳಿಂದ ಆರಾಧಿಸುವರು. ಭಕ್ತಿಗಿಂತ ಭೀತಿಯೇ ಈ ನೆಲೆಯಲ್ಲಿ ಮುಖ್ಯವಾದ ವಿವರ.

ಪ್ರಪಂಚದಲ್ಲೆಲ್ಲ ಧರ್ಮ ಆರಂಭವಾದುದು ಈ ನೆಲೆಯಲ್ಲಿಯೇ. ಈ ನಿಯಮಕ್ಕೆ ಕನ್ನಡ ನಾಡು ಹೊರತಾದುದಲ್ಲ. ಈಗಲೂ ನಮ್ಮ ಹಲವಾರು ಧಾರ್ಮಿಕ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಈ ನೆಲೆಯನ್ನು ಗುರುತಿಸಬಹುದು. ತುಳುನಾಡಿನ ಭೂತಾರಾಧನೆಯ ವಿವರಗಳನ್ನು ಗಮನಿಸಿದರೆ ಇದು ಗೊತ್ತಾಗುತ್ತದೆ. ಬದುಕಿದ್ದಾಗ ಎಲ್ಲರ ಗೌರವವನ್ನೋ ಹೆದರಿಕೆಯನ್ನೋ ಸೆಳೆದು, ತಮ್ಮ ಸಾಹಸದ ಕೆಲಸಗಳಿಂದ ಸುತ್ತಮುತ್ತಲವರಿಗೆ ಒಳ್ಳೆಯದನ್ನೋ ಕೆಟ್ಟದನ್ನೋ ಮಾಡಿ, ಎಲ್ಲರಂತಲ್ಲದೆ ವಿಶಿಷ್ಟವಾಗಿ ವಿಚಿತ್ರವಾಗಿ ಬಾಳಿ, ಯಾವುದಾದರೂ ಅಸಾಧಾರಣ ರೀತಿಯಲ್ಲಿ ತೀರಿಕೊಂಡ ಮನುಷ್ಯರು ದೈವಗಳಾಗಿ, ದೈಯಗಳಾಗಿ, ಭೂತಗಳಾಗಿ ಉಳಿದುಕೊಳ್ಳುವರು. ಅವರು ಮರೆಯಾದರೆಂದು ಅವರನ್ನು ಮರೆಯುವ ಹಾಗಿಲ್ಲ. ಏಕೆಂದರೆ ಬದುಕಿರುವವರಿಗೆ ಸತ್ತವರ ಕಾಟ ತಪ್ಪುವುದಿಲ್ಲ. ಅದರಲ್ಲಿಯೂ ಹೀಗೆ ದೈವಗಳಾದವರು ಒಲಿದರೆ ಒಳಿತು, ಮುನಿದರೆ ಅವರು ಮಾರಿಗಳು. ಅವರನ್ನು ದೂರ ಇರಿಸುವುದು ಸಾಧ್ಯವಿಲ್ಲದಾಗ ಅವರನ್ನು ಒಲಿಸಿಕೊಳ್ಳುವುದು ಅಗತ್ಯವಾಗುತ್ತದೆ. ಇದು ಆರಾಧನೆಯ ಆಕರ.

ಈ ಭೂತಾರಾಧನೆಯ ವಿವರಗಳನ್ನು ನೀವು ಇಂಥದೇ ಬೇರೊಂದು ಪುಸ್ತಕದಲ್ಲಿ ಓದಬಹುದು. ಈ ನೆಲೆ ಮಾರ್ಪಟ್ಟು, ಮುಂದರಿದು, ಸಭ್ಯತೆಯ ಪ್ರಭಾವವನ್ನು ಅಷ್ಟಿಷ್ಟು ತಳೆದು, ಗ್ರಾಮೀಣ ಜೀವನದಲ್ಲಿ ಹರಡಿ ಬೇರೂರಿ, ನಿಂತಾಗ ಅದೇ ಜಾನಪದ ನೆಲೆಯಾಯಿತು. ಇಲ್ಲಿ ಆರಾಧನೆಯ ವಿವರಗಳು ಕೆಲವು ವಿಧಿಗಳಲ್ಲಿ, ಕೆಲವು ಭಾವನೆಗಳಲ್ಲಿ ವ್ಯಕ್ತಗೊಳ್ಳುವುವು. ಜನ ತೊಡಗುವ ಕೆಲಸ ಕಾರ್ಯಗಳಲ್ಲಿ, ದಿನದಿನವೂ ನಡೆಯುವ ವ್ಯವಹಾರದಲ್ಲಿ, ಕಾಲಕಾಲಕ್ಕೆ ನಡೆಯುವ ಹಬ್ಬಹರಿದಿನಗಳಲ್ಲಿ, ಹಳ್ಳಿಯವರೆಲ್ಲ ಕಲೆತು ನಡೆಸುವ ಕುಣಿತ, ಹಾಡುವ ಹಾಡು, ಹೇಳುವ ಕಥೆ ಇವುಗಳಲ್ಲಿ ಈ ಜಾನಪದ ನೆಲೆಯನ್ನು

ಕಾಣಬಹುದು. ಜಾನಪದ ನೃತ್ಯ, ಜಾನಪದ ಸಂಗೀತ, ಜಾನಪದ ಕಥೆಗಳು, ಜಾನಪದ ವಿಧಿಗಳು, ಇವುಗಳಲ್ಲಿ ಅಡಗಿರುವ ಕಲ್ಪನೆಗಳು ತುಂಬ ಸ್ವಾರಸ್ಯವಾದವು.

ಕನ್ನಡ ನಾಡಿನ ಬೇರೆಬೇರೆ ಭಾಗಗಳಲ್ಲಿ ಬಗೆಬಗೆಯ ಜಾನಪದ ನೆಲೆ ಕಾಣಿಸಿಕೊಳ್ಳುತ್ತವೆ. ಮಲೆಯ ಮಾದೇಶ್ವರನ ಒಕ್ಕಲಾದ ಕಂಸಾಳೆಯವರು, ದೇವರ ಗುಡ್ಡರು, ಮಂಟೇಸ್ವಾಮಿಯ ಭಕ್ತರಾದ ನೀಲಗಾರರು ಮೈಸೂರಿನ ಕಡೆ ಇರುವರು. ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಕಡೆ ಸವದತ್ತಿ ಯಲ್ಲಮ್ಮನಿಗೆ ನಡೆದುಕೊಳ್ಳುವ ಚೌಡಿಕೆಯವರು, ಮೈಲಾರ ದೇವರ ಗುಡ್ಡರಾದ ಗೊರವರು, ಶಿವಯೋಗಿಯ ಹಿರಿಮೆಯನ್ನು ಹಾಡುವ ಕರಪಾಲ ಮೇಳದವರು, ಜುಂಜಪ್ಪದೇವರ ಭಕ್ತರಾದ ಕಾಡುಗೊಲ್ಲರು ಮೊದಲಾದವರು ನಾಡಿನ ದಕ್ಷಿಣ ಭಾಗದಲ್ಲಿ ಕಾಣಿಸಿಕೊಳ್ಳುತ್ತಾರೆ. ಹೀಗೆಯೇ ಉತ್ತರ ಭಾಗದಲ್ಲಿ ಸವದತ್ತಿ ಯಲ್ಲಮ್ಮನ ಭಕ್ತರಾದ ಜೋಗಿಯರು, ಕೊಲ್ಲಾಪುರದ ದೇವಿಯ ಒಕ್ಕಲಾದ ಗೊಂದಲಿಗರು, ಮೈಲಾರ ಲಿಂಗನ ಗುಡ್ಡರಾದ ಗೊರವರು, ಲಿಂಗದ ಬೀರರು, ತುಳುನಾಡಿನ ಭೂತಾರಾಧನೆ–ನಾಗಾರಾಧನೆಗಳಲ್ಲಿ ಪಾಲ್ಗೊಳ್ಳುವ ಜನ, ಮತ್ತು ಕೊಡುಗು ಸೀಮೆಯಲ್ಲಿ ಕಾವೇರಿ ತಾಯಿಯ ಒಕ್ಕಲು ಜನ ಇವರೆಲ್ಲ ನಡೆಸುವ ಕುಣಿತ, ಹೇಳುವ ಕಥೆ, ಅನುಸರಿಸುವ ವಿಧಿಗಳಲ್ಲಿ ಜಾನಪದ ನೆಲೆಯನ್ನು ಗುರುತಿಸುವುದು ಕಷ್ಟವಲ್ಲ.

ಇದು ಇನ್ನೂ ಜೀವಂತವಾಗಿರುವ ವಿವರ. ಹಳ್ಳಿಗಳಲ್ಲೇ ಏಕೆ, ಪಟ್ಟಣಗಳಲ್ಲಿಯೂ ಮಾರಮ್ಮ, ಊರಮ್ಮ, ದುರ್ಗಮ್ಮ, ಅಣ್ಣಮ್ಮ, ಯಲ್ಲಮ್ಮ, ಮುತ್ಯಾಲಮ್ಮ, ಉದ್ದಾಲಮ್ಮ ಮೊದಲಾದ ಗ್ರಾಮದೇವತೆಗಳ ಪೂಜೆ ನಡೆಯುತ್ತಿಲ್ಲವೆ ? ಕಾಯಿಲೆ-ಕಸಾಲೆಯಾದರೆ ಅಣ್ಣಮ್ಮನಿಗೋ ಮುತ್ಯಾಲಮ್ಮನಿಗೋ ಹರಕೆ ಹೊತ್ತುಕೊಳ್ಳುವುದಿಲ್ಲವೆ ? ಕೆಲವೊಮ್ಮೆ ಪಶುಬಲಿ, ಮದ್ಯ ನಿವೇದನ ಇವೂ ನಡೆಯುತ್ತವೆ; ಮೈಮೇಲೆ ದೇವತೆಯ ಆವೇಶ ಬರುವುದೂ ಉಂಟು. ಇಷ್ಟು ಮಾತ್ರವಲ್ಲದೆ ಮರ–ಗಿಡಗಳೂ (ತುಳಸಿ, ಅರಳಿ, ಬನ್ನಿ, ಆಲ, ಮೊದಲಾಗಿ) ಬೆಟ್ಟ–ಗುಡ್ಡಗಳೂ ಪೂಜೆಗೊಳ್ಳುತ್ತಿಲ್ಲವೆ ? ಪ್ರಾಣಿಗಳೂ (ಹಾವು, ಹಸು, ಎತ್ತು, ಆನೆ ಮೊದಲಾದುವು) ಪಕ್ಷಿಗಳೂ (ಗರುಡ ಮೊದಲಾದುವು) ಹೀಗೆಯೇ ಪೂಜೆಗೊಳ್ಳುತ್ತಿವೆ. ಇವೆಲ್ಲ ಜಾನಪದ ನೆಲೆಯಿಂದ ಬಂದ ನಂಬಿಕೆಗಳೇ, ಅಲ್ಲಿ ಮಾಡಿಕೊಂಡ ಪದ್ಧತಿಗಳೇ.

೩

ಮೊದಲ ಹಂತ

ಇತಿಹಾಸಪೂರ್ವಯುಗದಲ್ಲಿ ಕನ್ನಡನಾಡಿನ ಧರ್ಮ ಹೇಗಿದ್ದಿತು ಎಂದು ನಿಶ್ಚಯವಾಗಿ ಹೇಳುವುದು ಕಷ್ಟ. ಹೇಳಲು ಆಧಾರ ಸಾಲದು. ಉತ್ತರದಲ್ಲಿ ಹರಡಿ ನಿಂತ ಆರ್ಯ ಸಂಸ್ಕೃತಿ ದಕ್ಷಿಣಾಪಥಕ್ಕೆ ಬಂದಾಗ ಅವರ ವೈದಿಕ ಧರ್ಮವೂ ಬಂದಿತು. ಜಾನಪದ ಕಲ್ಪನೆಗಳು ಮೂಲವಾಗಿ ಉಳಿದು ಕೊಂಡರೂ ವೇದವಾಙ್ಮಯದ ಮನೋಧರ್ಮ ತನ್ನ ಪ್ರಭಾವವನ್ನು ಬೀರಿತು. ಆರ್ಯ–ದ್ರಾವಿಡ ಎರಡೂ ಸಂಸ್ಕೃತಿಗಳ ಸಮನ್ವಯ ಸಿದ್ಧ ವಾದಾಗ ಹೊಸ ದೇವತೆಗಳೂ (ಶಿವ, ವಿಷ್ಣು, ಸ್ಕಂದ, ಗಣಪತಿ ಮೊದ ಲಾದವರು) ಹೊಸ ಕಲ್ಪಗಳೂ (ಶ್ರೌತ–ಸ್ಮಾರ್ತ ವಿಧಿಗಳು) ಮೈದಳೆದುವು. ಪ್ರಾಚೀನ, ಆಗಂತುಕ ಧರ್ಮಗಳು ಹೀಗೆ ಕಲೆಯುತ್ತಿರುವಾಗಲೇ ಕನ್ನಡ ನಾಡಿಗೆ ಇನ್ನೊಂದು ವಿವರವೂ ಸೇರಿಬಂದಿತು.

ಇದು ಜೈನ, ಬೌದ್ಧ ಧರ್ಮಗಳ ಸಂಪರ್ಕ. ಇವೆರಡೂ ಉತ್ತರ ಭಾರತದ ಧರ್ಮಗಳು; ಬಹುಮಟ್ಟಿಗೆ ಮಗಧರಾಜ್ಯದಲ್ಲಿ ಬೆಳೆದು ಬಂದವು. ಕ್ರಿಸ್ತಪೂರ್ವ ಐದು–ಆರನೆಯ ಶತಮಾನಗಳಲ್ಲಿ ರೂಪುಗೊಂಡ ಈ ಧರ್ಮ ಗಳ ಪ್ರವರ್ತಕರು ಮಹಾವೀರ ಮತ್ತು ಗೌತಮ ಬುದ್ಧ ಇಬ್ಬರೂ ಸಮ ಕಾಲಿಕರು, ಒಂದೇ ಪ್ರಾಂತ್ಯದವರು, ಶ್ರಮಣಪರಂಪರೆಗೆ ಸೇರಿದವರು. ಮಗಧರಾಜ್ಯವನ್ನು ಮೌರ್ಯವಂಶದ ಅರಸರು ಆಳುತ್ತಿದ್ದಾಗ ಕನ್ನಡ ನಾಡಿನ ಮೇಲ್ಭಾಗ ಅವರ ವಶವಾಗಿದ್ದಿತೆಂದು ತೋರುತ್ತದೆ. ಹೀಗಾಗಿ ಅಲ್ಲಿ ಬೆಳೆದುಬಂದ ಧರ್ಮಗಳು ಕನ್ನಡ ನಾಡಿಗೆ ಇಳಿದುಬಂದುದು ಆಶ್ಚರ್ಯ ವೇನಲ್ಲ.

ಜೈನಧರ್ಮ ಕೊಂಚ ಮೊದಲು ಬಂದಿತು. ಅದು ಬಂದ ಕಥೆ ಹೀಗೆ : ಮಗಧದಲ್ಲಿ ಹನ್ನೆರಡು ವರ್ಷಗಳ ಬರಗಾಲ ಬರುವುದೆಂದು ತಿಳಿದಾಗ ಅಲ್ಲಿ ಜೈನ ಸಂಘದ ಆಚಾರ್ಯನಾಗಿದ್ದ ಭದ್ರಬಾಹು–ಶ್ರುತಕೇವಲಿ ತನ್ನ ಅನು ಯಾಯಿಗಳನ್ನು ಕೂಡಿಕೊಂಡು ದಕ್ಷಿಣಾಪಥದ ಕಡೆ ಹೊರಟ. ಆಗ ಅಲ್ಲಿ

ಸುಭಿಕ್ಷವಾಗಿದ್ದು ಜೈನಶ್ರಮಣರು ತಮ್ಮ ವಿಧಿ-ಪದ್ಧತಿಗಳಂತೆ ಬದುಕುವುದು ಸಾಧ್ಯವಾಗಿದ್ದಿತು. ಇವನೊಂದಿಗೆ ಮೌರ್ಯವಂಶದ ಅರಸನಾಗಿದ್ದ ಚಂದ್ರ ಗುಪ್ತನೂ ಹೊರಟ. ಹೀಗೆ ಹೊರಟವರು ಕನ್ನಡ ನಾಡಿನಲ್ಲಿ ಸುತ್ತಾಡುತ್ತ ಈಗ ಹಾಸನ ಜಿಲ್ಲೆಯಲ್ಲಿ ಶ್ರವಣಬೆಳ್ಗೊಳ ಇರುವ ಕಡೆ ಬಂದರು. ಅಲ್ಲಿ ಚಿಕ್ಕಬೆಟ್ಟದ ಮೇಲೆ ನೆಲೆಸಿದರು. ಭದ್ರಬಾಹು ಮುನಿ ಅಲ್ಲಿಯೇ ತೀರಿ ಕೊಂಡನಂತರ, ಅವನ ಪಾದಚಿಹ್ನೆಗಳನ್ನು ಪೂಜಿಸುತ್ತ ಚಂದ್ರಗುಪ್ತನೂ ಅಲ್ಲಿಯೇ ಇದ್ದುಬಿಟ್ಟ. ಈಗ ಚಂದ್ರಗಿರಿ ಎನಿಸಿಕೊಳ್ಳುವ ಆ ಚಿಕ್ಕಬೆಟ್ಟ ಹೀಗೆ ಜೈನ ಧರ್ಮದ ಕೇಂದ್ರವಾಯಿತು. ಇದು ನಡೆದುದು ಕ್ರಿಸ್ತಪೂರ್ವ ೪೦೦ರ ಸುಮಾರಿಗೆ.

ಚಂದ್ರಗುಪ್ತನ ಮೊಮ್ಮಗ ಅಶೋಕ ಚಕ್ರವರ್ತಿಯ ಕಾಲದಲ್ಲಿ, ಕ್ರಿಸ್ತ ಪೂರ್ವ ೨೫೦ರ ಸುಮಾರಿಗೆ ಬೌದ್ಧಧರ್ಮ ಕನ್ನಡ ನಾಡನ್ನು ಮುಟ್ಟಿತು. ಅಶೋಕ ಜಗತ್ಪ್ರಸಿದ್ಧನಾದ ರಾಜ. ಅವನ ಮನಸ್ಸು ಬೌದ್ಧ ಧರ್ಮಕ್ಕೆ ಒಲಿದ ಮೇಲೆ ತನ್ನ ರಾಜ್ಯದಲ್ಲೆಲ್ಲ ಈ ಧರ್ಮದ ಮೂಲಭೂತ ತತ್ತ್ವಗಳನ್ನು ಹರಡಲು ತೊಡಗಿ, ನಾಡಿನ ಮೂಲೆ ಮೂಲೆಗೂ ಧರ್ಮಪ್ರಚಾರಕರನ್ನು ಕಳುಹಿಸಿದ. ಆಗ ಕನ್ನಡ ನಾಡು 'ಮಹಿಷಮಂಡಲ' ಅಥವಾ 'ಮಹಿಷಕ' (ಎಂದರೆ ಈಗಿನ ಮೈಸೂರು) ಮತ್ತು 'ಬನವಾಸಿ' (ಎಂದರೆ ಉತ್ತರ ಭಾಗ) ಎನಿಸಿಕೊಳ್ಳುತ್ತಿದ್ದಿತು. ಮೌರ್ಯ ಸಾಮ್ರಾಜ್ಯಕ್ಕೆ ಸೇರಿದಂತೆಯೇ ಇದ್ದುದ ರಿಂದ ಇಲ್ಲಿಗೂ ಧರ್ಮಪ್ರಚಾರಕರು ಬಂದಿದ್ದ ಉಲ್ಲೇಖವಿದೆ. ಅಶೋಕನು ಬುದ್ಧನ ಬೋಧೆಗಳನ್ನು ತಿಳಿಯಾದ, ಆಡುಮಾತಾದ ಪ್ರಾಕೃತದಲ್ಲಿ ಬಂಡೆ ಗಳ ಮೇಲೆ ಕಲ್ಲುಕಂಬಗಳ ಮೇಲೆ ಕಡೆಯಿಸಿ ದೇಶದಲ್ಲೆಲ್ಲ ನಿಲ್ಲಿಸಿದ. ಇಂಥ ಶಿಲಾಶಾಸನಗಳು ಕನ್ನಡ ನಾಡಿನಲ್ಲಿ ದೊರೆತಿವೆ; ಚಿತ್ರದುರ್ಗ ಜಿಲ್ಲೆಯ ಮೊಳ ಕಾಲ್ಮುರು ತಾಲ್ಲೂಕಿನ ಸಿದ್ದಾಪುರ, ಮಸ್ಕಿ, ಜಟಿಂಗ-ರಾಮೇಶ್ವರ ಮತ್ತು ರಾಯಚೂರು ಜಿಲ್ಲೆಯಲ್ಲಿ ಇಂದಿಗೂ ನಿಂತಿವೆ.

ಬೌದ್ಧ ಧರ್ಮ ಪ್ರಬಲವಾದ ಪಂಥವಾಗಿದ್ದು ಭಾರತದಲ್ಲೆಲ್ಲ ಮತ್ತು ಭಾರತದಾಚೆ ಸಿಂಹಳ, ಬರ್ಮ, ಟಿಬೆಟ್, ಕೊರಿಯಾ, ಚೀಣ, ಜಪಾನ್ ಗಳಲ್ಲೂ ಹರಡಿತಾದರೂ ಕನ್ನಡ ನಾಡಿನಲ್ಲಿ ಅದು ಏಕೋ ಬೇರೂರಲಿಲ್ಲ. ಜೈನ ಧರ್ಮ ಆಗಲೇ ಬೆಳೆದಿದ್ದುದೇ ಕಾರಣವೋ, ಅರಸರ ಪ್ರೋತ್ಸಾಹ ಸಾಕಷ್ಟು ಇಲ್ಲವಾದುದು ಕಾರಣವೋ, ಬೌದ್ಧಪ್ರಚಾರಕರು ಸಮರ್ಥರಾಗಿರ

ದಿದ್ದುದು ಕಾರಣವೋ, ಏನೋ, ಅಂತೂ ಬೌದ್ಧ ಧರ್ಮ ಅಷ್ಟಾಗಿ ಇಲ್ಲಿ ಪ್ರಭಾವ ಬೀರಲಿಲ್ಲ.

ಆದರೆ ಕ್ರಿಸ್ತಾಬ್ದ ಸುಮಾರು ಹನ್ನೆರಡನೆಯ ಶತಮಾನದವರೆಗೂ ಇಲ್ಲಿ ಬೌದ್ಧ ಧರ್ಮ ಉಳಿದು ಬಂದ ಕುರುಹುಗಳಿವೆ. ಧಾರವಾಡ ಜಿಲ್ಲೆಯ ಡಂಬಳ ಎಂಬಲ್ಲಿ ಕ್ರಿಸ್ತಾಬ್ದ ೧೦೯೫ರ ಕಾಲದ ಶಾಸನವೊಂದು ದೊರೆತಿದೆ. ಇದರಿಂದ ತಿಳಿಯುವ ವಿವರ ಹದಿನಾರು ಮಂದಿ ಸೆಟ್ಟರು ಅಲ್ಲಿ ಬೌದ್ಧವಿಹಾರ ವೊಂದನ್ನೂ ತಾರಾಭಗವತಿಯ ಗುಡಿಯೊಂದನ್ನೂ ಕಟ್ಟಿಸಿದರೆಂಬುದು. ಮೌರ್ಯವಂಶದ ಆಡಳಿತ ಸಡಿಲವಾಗಿ ಕನ್ನಡ ನಾಡು ಅದರಿಂದ ಬಿಡುಗಡೆ ಪಡೆದದ್ದು ಶಾತವಾಹನ ರಾಜರ ಕಾಲದಲ್ಲಿ. ಈ ಶಾತವಾಹನ ವಂಶದ ಮೊದಲ ರಾಜರು ಬೌದ್ಧ ಧರ್ಮದವರೆಂದು ತಿಳಿದುಬರುತ್ತದೆ. ಆದರೆ ಅವರು ಕ್ರಮೇಣ ಶೈವಧರ್ಮದ ಪ್ರಭಾವದೊಳಗೆ ಸೇರಿ ವೇದಮಾರ್ಗ ವನ್ನು ಹಿಡಿದರು; ಯಜ್ಞಯಾಗಾದಿಗಳನ್ನು ಮಾಡತೊಡಗಿದರು. ಕ್ರಿಸ್ತ ಪೂರ್ವ ೧೬೮ರ ಸುಮಾರಿಗೆ ರಾಜನಾಗಿದ್ದ ಶಾತವಾಹನ (ಅಥವಾ ಶಾಲಿ ವಾಹನ) ತಾಳಗುಂದದಲ್ಲಿ 'ಭವ'ವನ್ನು (ಎಂದರೆ ಶಿವನನ್ನು) ಆರಾಧನೆ ಮಾಡಿದ ಪ್ರಸ್ತಾಪ ಒಂದು ಶಾಸನದಲ್ಲಿದೆ. ಅವರ ರಾಜಧಾನಿಯಾಗಿದ್ದ ಪೈಠಣ ವೈದಿಕ ಧರ್ಮದ ಕೇಂದ್ರವಾಗಿದ್ದಿತು. ಇಷ್ಟಾದರೂ ಈ ಅರಸರು ಬೌದ್ಧ ಧರ್ಮ ಬೆಳೆಯಲು ಅವಕಾಶಮಾಡಿಕೊಟ್ಟರು. ಈ ವಂಶದ ಅರಸರು ಮಾತ್ರವಲ್ಲದೆ ಆ ಕಾಲದಲ್ಲಿ ಇಲ್ಲಿ ಅಲ್ಲಲ್ಲಿ ಆಳಿದ ಪಲ್ಲವರೂ, ಬಾಣರೂ, ಪುನ್ನಾಟರೂ, ಆಳುಪರೂ ಬೌದ್ಧ ಧರ್ಮವನ್ನೂ ವೈದಿಕ ಧರ್ಮವನ್ನೂ ಜೈನ ಧರ್ಮವನ್ನೂ ಸಮನಾಗಿಯೇ ಕಂಡುಕೊಳ್ಳುತ್ತಿದ್ದರು. ಕ್ರಿಸ್ತಾಬ್ದ ೩೩೮ರಲ್ಲಿದ್ದ ಬಾಣರಾಜನೊಬ್ಬ, ಮಲ್ಲಿದೇವ ನಂದಿವರ್ಮ, ಸರ್ವಜೀವ ದಯಾಪರನಾದ ಬೋಧಿಸತ್ವನೆಂದು ಹೆಸರು ಹೊತ್ತಿದ್ದ. ಇದರಿಂದ ಬೌದ್ಧ ಧರ್ಮದ ಮೇಲೆ ಅವನ ಒಲವು ಇದ್ದುದು ಸ್ಪಷ್ಟವಾಗುತ್ತದೆಯಲ್ಲವೆ ?

ಇಷ್ಟು ಪ್ರೋತ್ಸಾಹವಿದ್ದರೂ ಬೌದ್ಧ ಧರ್ಮ ಬರುಬರುತ್ತ ಕಳೆ ಗುಂದುತ್ತ ಬಂದಿತು. ಕೆಲವು ಕಡೆ ಮಾತ್ರ ಅದರ ಪ್ರಾಬಲ್ಯ ಕೆಲಕಾಲದ ವರೆಗೆ ಉಳಿಯಿತು. ಬಳ್ಳಿಗಾವೆ, ಕಲಾವತಿ, ಮಂಗಳೂರು–ಕದಿರಿ ಮೊದ ಲಾದ ಸ್ಥಳಗಳಲ್ಲಿ ಮಹಾಯಾನ ಪಂಥದ ವಿಹಾರಗಳೂ, ಚೈತ್ಯಗಳೂ, ಗುಡಿ ಗಳೂ ಪ್ರಸಿದ್ಧವಾಗಿದ್ದುವು. ಸನ್ನತಿ ಮತ್ತು ಬನವಾಸಿಗಳಂತೂ ಬೌದ್ಧ ಸಂಸ್ಕೃತಿಯ ಕೇಂದ್ರವೆನಿಸಿದ್ದುವು.

ಮಂಗಳೂರು ಬಳಿಯ ಕದಿರಿಯ ಶ್ರೀಮಂಜುನಾಥ ದೇವಾಲಯದಲ್ಲಿರುವ
ಬುದ್ಧನ ವಿಗ್ರಹ. ಕ್ರಿ. ಶ. ೧೦ನೆಯ ಶತಮಾನಕ್ಕೆ ಸೇರಿದ್ದು

ಬನವಾಸಿಯ ಹೆಸರನ್ನು ಮುಂದೆ ತಂದವರು ಕದಂಬ ರಾಜರು. ಇವರ ಪ್ರಮುಖವಾದ ಪ್ರಶಸ್ತಿಯೆಂದರೆ 'ವೈಜಯಂತೀ ಪುರವರಾಧೀಶ್ವರ' ಎಂಬುದು. ವೈಜಯಂತಿಪುರವೆನ್ನುವುದು ಬನವಾಸಿಯ ಸಂಸ್ಕೃತದ ಹೆಸರು. ಕ್ರಿಸ್ತಾಬ್ದ ೩೮೦ರ ಸುಮಾರಿಗೆ ಪ್ರಾಬಲ್ಯಕ್ಕೆ ಬಂದ ಈ ವಂಶದ ಮೂಲ ಪುರುಷ ಮಯೂರಶರ್ಮನೆಂಬುವನು. ಅವನ ಹೆಸರೇ ಹೇಳುವಂತೆ ಅವನು ಬ್ರಾಹ್ಮಣ; ಎಂದರೆ ವೇದಮಾರ್ಗನಿರತ. ರಾಜನಾದ ಮೇಲೆ ಮಯೂರ

ವರ್ಮನಾದ; ಅಶ್ವಮೇಧಯಾಗವೊಂದನ್ನೂ ಮಾಡಿದ. ಇವನ ವಂಶ ಕ್ರಿಸ್ತಾಬ್ದ ೫೪೦ರ ವರೆಗೂ ಏಳಿಗೆಯಲ್ಲಿಯೇ ಇದ್ದಿತು.

ಕದಂಬ ರಾಜರು ವೈದಿಕ ಧರ್ಮಕ್ಕೆ ಒಲಿದವರು; ಅವರ ಕುಲದೇವತೆ ಬನವಾಸಿಯ ಮಧುಕೇಶ್ವರ. ಈ ವಂಶದ ಕಾಕುತ್‌ಸ್ಥವರ್ಮ ತಾಳಗುಂದದ ಪ್ರಣವೇಶ್ವರಸ್ವಾಮಿಗೆ ನಡೆದುಕೊಳ್ಳುತ್ತಿದ್ದ. ಇವರ ಕಾಲದಲ್ಲಿ ವೇದಾಭ್ಯಾಸಕ್ಕೆ ಉತ್ತೇಜನ ದೊರೆಯಿತು; ಶ್ರೌತ-ಸ್ಮಾರ್ತ ಸಂಪ್ರದಾಯ ಬೆಳೆಯಲು ಅವಕಾಶವಾಯಿತು. ಆದರೆ ಕದಂಬ ರಾಜರು, ತಮ್ಮ ಸ್ವಧರ್ಮ ಏನೇ

ಕಾರ್ಕಳದ ಹಿರಿಯಂಗಡಿಯ ನೇಮಿನಾಥ ಬಸದಿಯಲ್ಲಿರುವ
ನೇಮಿನಾಥಸ್ವಾಮಿಯ ಬಿಂಬ-ಕ್ರಿ. ಶ. ೧೪ನೆಯ ಶತಮಾನಕ್ಕೆ ಸೇರಿದ್ದು.

ಇರಲಿ, ಇತರ ಧರ್ಮಗಳನ್ನೂ ಪ್ರೋತ್ಸಾಹಿಸಿದರು. ಅವರ ಕಾಲದಲ್ಲಿ ಹಾನಗಲ್ಲು, ಪುಲಿಗೆರೆ, ಪನಶೋಕ (ಹನಶೋಗೆ), ಕಳ್ಬಪ್ಪು (ಶ್ರವಣ ಬೆಳ್ಗೊಳ) ಮೊದಲಾದವು ಜೈನಕೇಂದ್ರಗಳಾಗಿದ್ದುವು. ಅರಸರು ಜೈನ ವಿದ್ವಾಂಸರಾದ ಪೂಜ್ಯಪಾದ, ನಿರವದ್ಯಪಂಡಿತ ಮೊದಲಾದವರನ್ನು ಸನ್ಮಾನಿಸಿದುದು ಶಾಸನಗಳಿಂದ ತಿಳಿದುಬರುತ್ತದೆ. ಹಾಗೆಯೇ ಬನವಾಸಿ, ಅಜಂತಾ ಇವು ಬೌದ್ಧಧರ್ಮದ ಕೇಂದ್ರಗಳಾಗಿದ್ದವು. ಕ್ರಿಸ್ತಾಬ್ದ ೬೩೦ರ ಸುಮಾರಿಗೆ ಬನವಾಸಿಗೆ ಬಂದಿದ್ದ ಚೀಣೀ ಪ್ರವಾಸಿ ಹುಎನ್‌ತ್ಸಾಂಗ್ ಬನ ವಾಸಿಯಲ್ಲಿ ಮೆರೆಯುತ್ತಿದ್ದ ಬೌದ್ಧ ಧರ್ಮದ ವಿಚಾರ ಬರೆದಿದ್ದಾನೆ. ಹೀನ ಯಾನ-ಮಹಾಯಾನ ಎರಡೂ ಪಂಥಗಳು ಅಲ್ಲಿ ಒಟ್ಟಿಗೆ ಇದ್ದುವಂತೆ; ಒಂದು ನೂರು ಸಂಘಾರಾಮಗಳಿದ್ದುವಂತೆ: ಅಲ್ಲಿದ್ದ ಬೌದ್ಧಭಿಕ್ಷುಗಳ ಸಂಖ್ಯೆ ಒಂದು ಸಾವಿರದಷ್ಟಿದ್ದಿತಂತೆ!

ಆರಂಭದಲ್ಲಿಯೇ ನಾವು ಹೇಳಿದ ಕನ್ನಡ ನಾಡಿನ ಮನೋಧರ್ಮ ಮೂಡಿಬಂದುದು ಹೀಗೆ. ಶಾತವಾಹನ ರಾಜರೂ, ಕದಂಬ ರಾಜರೂ ಕನ್ನಡ ನಾಡನ್ನು ಕಟ್ಟಿದವರು; ಅದಕ್ಕೊಂದು ವಿಶೇಷ ಪ್ರಶಸ್ತಿಯನ್ನು ಗಳಿಸಿ ಕೊಟ್ಟವರು. ಅವರು ಧರ್ಮಗಳನ್ನು ಕಂಡುಕೊಂಡ ರೀತಿ ನಾಡಿಗೇ ಒಂದು ಮೇಲ್ಪಂಕ್ತಿಯಾಯಿತು, ಜನರ ಮನೋಧರ್ಮವನ್ನು ರೂಪಿಸಿತು. ನಾಡಿನ ಇತಿಹಾಸ ಮೊದಲಾಗುವ ಹಂತದಲ್ಲಿಯೇ ವೈದಿಕ ಧರ್ಮ, ಜೈನ ಧರ್ಮ ಮತ್ತು ಬೌದ್ಧ ಧರ್ಮಗಳು ಇಲ್ಲಿ ಅನ್ಯೋನ್ಯವಾಗಿ ಕಲೆತಿದ್ದುವು. ಧರ್ಮದ ಹೆಸರಿನಲ್ಲಿ ಜನ ಕಚ್ಚಾಡುವರೆಂಬ ಅಪವಾದ ಇಲ್ಲಿ ಎಷ್ಟು ಮಾತ್ರವೂ ಇರಲಿಲ್ಲ. ಸಹಬಾಳ್ವೆಯ ಗುಟ್ಟನ್ನು, ಸಹಕಾರದ ಅಗತ್ಯವನ್ನು ಕನ್ನಡ ಜನ ಸಹಜವಾಗಿಯೇ ಮೈದುಂಬಿಸಿಕೊಂಡರು. ದೇಶದ ಇತರ ಕಡೆಗಳಲ್ಲಿ ಆದಂತೆಯೇ ಬೌದ್ಧ ಧರ್ಮ ಕ್ರಿಸ್ತಾಬ್ದ ಆರು-ಏಳನೆಯ ಶತಮಾನದ ಸುಮಾ ರಿಗೆ ಇಲ್ಲಿಂದಲೂ ಮರೆಯಾಯಿತು. ಆದರೆ ಜೈನ ಧರ್ಮ, ವೈದಿಕ ಧರ್ಮ ಗಳು ಇಂದಿನವರೆಗೂ ಯಾವ ಉಪದ್ರವವೂ ಇಲ್ಲದೆ ಉಳಿದುಬಂದಿವೆ.

೪

ಹಿಂದೂಧರ್ಮದ ಸಿದ್ಧತೆ

ಕನ್ನಡ ನಾಡಿನ ಭಾಗ್ಯವನ್ನು ರೂಪಿಸಿದವರು ಕದಂಬರಾದರೆ ಅದನ್ನು ಹೆಚ್ಚಿಸಿದವರು ಗಂಗರು. ಅವರ ಆಡಳಿತದ ಅವಧಿಯೂ ತುಂಬ ದೀರ್ಘವಾದುದು. ಅರಸೊತ್ತಿಗೆ ಆರಂಭವಾದುದು ಕ್ರಿಸ್ತಾಬ್ದ ೨೫೦ರಲ್ಲಿ ; ಹದಿನಾರನೆಯ ಶತಮಾನದವರೆಗೂ ಗಂಗಮನೆತನದ ಅರಸರು ಅಲ್ಲಲ್ಲಿ ಆಳುತ್ತ ಬಂದಿದ್ದರು. ಗಂಗಮನೆತನದ ಮೂಲಪುರುಷ ಮಾಧವ; ಅವನೇ ಕೊಂಗುಣಿವರ್ಮ ಮಹಾರಾಜನೆಂದು ಪಟ್ಟಭದ್ರನಾದವನು. ಇವನ ತಂದೆ ಪದ್ಮನಾಭ ವೇದಮಾರ್ಗವನ್ನು ಅವಲಂಬಿಸಿದ್ದವನು. ಆದರೆ ಮಾಧವ ಮತ್ತು ಅವನ ತಮ್ಮ ದಡಿಗ ಇವರು ರಾಜ್ಯವನ್ನು ಕಟ್ಟಿದುದು ಸಿಂಹನಂದಿಯೆಂಬ ಜೈನ ಗುರುವಿನ ನೆರವಿನಿಂದ. ಆದುದರಿಂದ ಈ ವಂಶದ ಅರಸರು ಜೈನ ಧರ್ಮವನ್ನು ವಿಶೇಷವಾಗಿ ಪ್ರೋತ್ಸಾಹಿಸಿದರು. ಮೊದಲಿನ ಅರಸರು ಜೈನ ಧರ್ಮದವರೇ ಆಗಿದ್ದರು. ಕೊಂಗುಣಿವರ್ಮ ಕುವಲಾಲಪುರದಲ್ಲಿ (ಎಂದರೆ ಈಗಿನ ಕೋಲಾರದಲ್ಲಿ) ತನ್ನ ಅರಸೊತ್ತಿಗೆಯನ್ನು ಬೇರೂರಿಸಿದ ನಂತರ ಈ ಪ್ರಾಂತ್ಯದಲ್ಲಿ ಜೈನ ಧರ್ಮ ಬೆಳೆಯತೊಡಗಿತು. ಇವನ ಮೊಮ್ಮಗ ಹರಿವರ್ಮ ರಾಜಧಾನಿಯನ್ನು ಕಾವೇರಿ ತೀರದ ತಲಕಾಡಿಗೆ ಮಾರ್ಪಡಿಸಿದ ನಂತರ ಈ ಅರಸರ ಆಸಕ್ತಿ ವೈದಿಕ ಧರ್ಮದ ಕಡೆ ತಿರುಗಿತು.

ಹರಿವರ್ಮನ ಮಗ ವಿಷ್ಣುಗೋಪನೆಂಬುವನು ವೈಷ್ಣವಪಂಥವನ್ನು ಸ್ವೀಕರಿಸಿದ ; ತನ್ನನ್ನು 'ನಾರಾಯಣಪಾದಾರವಿಂದಪೂಜಾನಿರತ'ನೆಂದು ಬಣ್ಣಿಸಿಕೊಂಡ. ಆದರೆ ಜೈನ ಧರ್ಮವನ್ನೇನು ಕಡೆಗಣ್ಣಿನಿಂದ ಕಾಣಲಿಲ್ಲ. ಅವನ ಮೊಮ್ಮಗ ಅವಿನೀತನ ಒಲವು ಶಿವನ ಕಡೆ ತಿರುಗಿತು ; ಅವನನ್ನು 'ಹರಚರಣಾರವಿಂದ ಪ್ರಣಿಪಾತ'ನೆಂದು ಶಾಸನವೊಂದು ಕರೆದಿದೆ. ಆದರೂ ಅವನು ನಾಡಿನಲ್ಲಿ ಪ್ರೋತ್ಸಾಹಿಸಿದುದು ಜೈನ ಧರ್ಮವನ್ನೇ. ಹೀಗೆಯೇ ಅವನ ಮಗ ದುರ್ವಿನೀತನೂ (ಕಾಲ, ಕ್ರಿಸ್ತಾಬ್ದ ೪೮೨ರ ಸುಮಾರು) ವೈದಿಕ ಧರ್ಮ–ಜೈನ ಧರ್ಮಗಳೆರಡನ್ನೂ ಎರಡು ಕಣ್ಣುಗಳಂತೆ ಕಂಡು

ಕೊಂಡಿದ್ದನು. ಎರಡು ಧರ್ಮಗಳೂ ಗಂಗರಾಜರ ಕಾಲದಲ್ಲಿ ಒಟ್ಟಿಗೆ ಬೆಳೆದುವು. ಈ ಸಂಪರ್ಕದಿಂದ ಪರಸ್ಪರ ಲಾಭವೂ ಆಯಿತು.

ಗಂಗರಾಜರು ಜೈನರಾದರೂ ಹಿಂದೂಧರ್ಮಕ್ಕೆ ಸೇರಿದ ಹಲವಾರು ಗುಡಿಗಳನ್ನು ಕಟ್ಟಿಸಿ ದಾನಧರ್ಮಗಳನ್ನು ಮಾಡಿದರು. ಕನ್ನಡ ನಾಡಿನಲ್ಲಿ ಅರಸರ ಹೆಸರಿನಿಂದ ಮೂಡಿಬಂದ ಈಶ್ವರ ದೇವಾಲಯಗಳು ಇವರ ಕಾಲದವು. ಪೊಲ್ಮದ ವಿನೀತೇಶ್ವರ (ಕ್ರಿ. ೭೫೦), ಜಗಧರ ನಗರೇಶ್ವರ, ನೀತಿಮಾರ್ಗೇಶ್ವರ (ಕ್ರಿ. ೯೦೭ರ ಸುಮಾರು), ಶಿವರಾಮೇಶ್ವರ. ವರುಣದ ಮಹಾಲಿಂಗೇಶ್ವರ ಮೊದಲಾದ ಗುಡಿಗಳು ನಿದರ್ಶನಗಳು. ಮುಂದೆ ಚಾಳುಕ್ಯರ ಕಾಲದಲ್ಲಿ ಹಿಂದೂಧರ್ಮದ ಉದಾರ ಸ್ವಭಾವ ರೂಪುಗೊಳ್ಳಲು ಪ್ರಾಚೀನ ಗಂಗರ ನೀತಿ ನೆರವಾಯಿತು.

ಬಾದಾಮಿಯ ಪಶ್ಚಿಮ ಚಾಳುಕ್ಯರು ಮೊದಲು ಕ್ರಿಸ್ತಾಬ್ದ ಐದನೆಯ ಶತಮಾನದಿಂದ ಎಂಟನೆಯ ಶತಮಾನದವರೆಗೂ ಆಳಿದರು. ಇವರು ವೈಷ್ಣವರು, 'ನಾರಾಯಣಪ್ರಸಾದ'ವನ್ನು ಪಡೆದು ವರಾಹ ಲಾಂಛನವನ್ನು ತಳೆದವರು ; ಆದರೂ ಸಮರದೇವತೆಯಾದ ಕಾರ್ತಿಕೇಯನ ಭಕ್ತರು. ಮತ್ತೆ, ಅವರು ಶೈವಧರ್ಮವನ್ನು ಬೆಳೆಸಿದರು. ಚಾಳುಕ್ಯ ವಿಕ್ರಮ ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ (ಕ್ರಿ. ೬೦೦ರ ಸುಮಾರು) ಮೈದಳೆದ ಶಿವದೇವಾಲಯಗಳಲ್ಲಿ ಕಲ್ಲೇಶ್ವರ, ಮಲ್ಲಿಕಾರ್ಜುನ, ದುರ್ಗಾ, ವಿರೂಪಾಕ್ಷ. ಪಾಪನಾಥೇಶ್ವರ ಮೊದಲಾದುವು ವಾಸ್ತುಶಿಲ್ಪದ ಇತಿಹಾಸದಲ್ಲಿ ಮೈಲಿಗಲ್ಲುಗಳು. ಮಂಗಳೀಶನ ಕಾಲದಲ್ಲಿ ಕಟ್ಟಲ್ಪಟ್ಟ ಮಹಾಕೂಟದೇವಾಲಯವು 'ಶೈವಪುಣ್ಯಕ್ಷೇತ್ರ'ವೆಂದೇ ಪ್ರಸಿದ್ಧವಾಯಿತು. ಬಾದಾಮಿಯ ವಿಷ್ಣುಗುಹಾಂತರ್ದೇವಾಲಯವೂ (ಗುಹೆಯನ್ನೇ ಕಡೆದು ಕಟ್ಟಿದ ಗುಡಿ) ಇದೇ ಕಾಲದಲ್ಲಿ ಸಿದ್ಧವಾಯಿತು. ಚಾಳುಕ್ಯರ ಆಳ್ವಿಕೆಯಲ್ಲಿಯೇ ಕನ್ನಡ ನಾಡು ಪಾಶುಪತ ಶೈವ ಪಂಥಕ್ಕೆ ಕೇಂದ್ರವಾದುದು. ಇದೇ ಸಮಯದಲ್ಲಿ ತಮಿಳು ನಾಡಿನಲ್ಲಿ ವೈಷ್ಣವ ಆಳ್ವಾರರು ಕಾಣಿಸಿಕೊಂಡು ವಿಷ್ಣುಭಕ್ತಿಯನ್ನು ಹರಡುತ್ತಿದ್ದರಾಗಿ ಅವರ ಪ್ರಭಾವ ನಮ್ಮ ಪ್ರಾಂತ್ಯವನ್ನೂ ಮುಟ್ಟಿತು.

ಶೈವ, ವೈಷ್ಣವ ಧರ್ಮಗಳು ಹೀಗೆ ಬೆಳೆಯುತ್ತಿದ್ದರೂ ಹಿಂದಿನ ಜೈನ, ಬೌದ್ಧ ಧರ್ಮಗಳಿಗೆ ಗಾಸಿಯಾಗಲಿಲ್ಲ. ಇಮ್ಮಡಿ ಪುಲಿಕೇಶಿಯ ಆಸ್ಥಾನದಲ್ಲಿದ್ದ ಸುಪ್ರಸಿದ್ಧ ರವಿಕೀರ್ತಿ (ಐಹೊಳೆ ಶಾಸನದವನು) ಜೈನನೇ. ತುಂಬಲೂರಿನ ಶ್ರೀವರ್ಧದೇವ, ಪೂಜ್ಯಪಾದ ಮೊದಲಾದ ಜೈನಾಚಾರ್ಯರಿಗೆ



ಪಟ್ಟದಕಲ್ಲಿನಲ್ಲಿರುವ ಬಾದಾಮಿ ಚಾಲುಕ್ಯರ ಕಾಲದ ಮಲ್ಲಿಕಾರ್ಜುನ ದೇವಾಲಯ

ವಿಶೇಷ ಮರ್ಯಾದೆಯಿದ್ದಿತು. ಬನವಾಸಿಯಲ್ಲಿ ಬೌದ್ಧ ಧರ್ಮವೂ ಪ್ರಬಲ ವಾಗಿದ್ದಿತು. ವಾರಾಣಸಿಯಲ್ಲಿ ಬುದ್ಧನು ಮೊಟ್ಟಮೊದಲಿಗೆ ಬೋಧಿಸಿದುದು ಮೃಗದಾವದಲ್ಲಿ ; ಬನವಾಸಿಯಲ್ಲಿಯೂ ಒಂದು ಮೃಗದಾವವಿದ್ದಿತು. ಅಲ್ಲಿದ್ದ ಜಯಂತೀ ಪ್ರ-ಬೌದ್ಧ ವಿಹಾರವನ್ನು ಕಟ್ಟಿಸಿದವನು ದಂಡನಾಯಕ ರೂಪಭಟ್ಟಯ್ಯ, ಚಾಳುಕ್ಯರಾಜ ಆಹವಮಲ್ಲನ ಮಂತ್ರಿ.

ಈ ಸಂದರ್ಭದಲ್ಲಿ ಸ್ವಾರಸ್ಯವೊಂದನ್ನು ಗಮನಿಸಬೇಕು. ಶಿಕಾರಿಪುರದಲ್ಲಿ ಕ್ರಿಸ್ತಾಬ್ದ ೧೦೪೮ರ ಶಾಸನವೊಂದು ದೊರೆತಿದೆ. ನಾಗವರ್ಮನೆಂಬ ಅಧಿಕಾರಿಯೊಬ್ಬನು ನಾಲ್ಕು ಆಲಯಗಳನ್ನು ಕಟ್ಟಿಸಿದುದನ್ನು ಈ ಶಾಸನ ತಿಳಿಸುತ್ತದೆ. ಈ ನಾಲ್ಕು ಆಲಯಗಳು ಯಾರುಯಾರಿಗೆ ಗೊತ್ತೇ ? ಜಿನ, ವಿಷ್ಣು, ಶಿವ, ಮುನಿ (ಶಾಕ್ಯಮುನಿ, ಎಂದರೆ ಬುದ್ಧ) ಇವರಿಗೆ ! ಇದು ಸಮನ್ವಯ ಮನೋಧರ್ಮ, ಹಿಂದೂಗಳು ಅಳವಡಿಸಿಕೊಂಡು ಬಂದಿರುವ ಗುಣ ಇದು. ದಂಡನಾಯಕ ರೂಪಭಟ್ಟಯ್ಯನು ಕಟ್ಟಿಸಿದ ಜಯಂತೀ ಪ್ರ-ಬೌದ್ಧ ವಿಹಾರದಲ್ಲಿ ಅವನು ತಾರಾಭಗವತಿ, ಕೇಶವ, ಲೋಕೇಶ್ವರ, ಬುದ್ಧ ಇವರ ಆರಾಧನೆಗೆ ವ್ಯವಸ್ಥೆಮಾಡಿದ್ದನು. ಹೀಗೆಯೇ ಬಾಪ್ಪುರೆ-ನಾಗಿಯಕ್ಕ ಎಂಬುವಳೂ ಕೇಶವ, ಲೋಕೇಶ್ವರ, ಬುದ್ಧದೇವ ಇವರ ಮೂರ್ತಿಗಳನ್ನು ಪ್ರತಿಷ್ಠೆಮಾಡಿಸಿದಳು. ಬಳ್ಳಿಗಾವೆಯ ನಾಡಪೇರ್ಗಡೆ ಸಹವಾಸಿ-ಹಂಪಚೆಟ್ಟಿಯ ಹೆಂಡತಿ ಈಕೆ ; ಇವಳ ದಾನಕ್ಕೆ ಚಾಳುಕ್ಯ ಚಕ್ರವರ್ತಿ ಆಹವಮಲ್ಲನ ಮೆಚ್ಚುಗೆಯ ಅನುಮೋದನೆ ದೊರೆಯಿತು.

ಉತ್ತರ ಭಾರತದಲ್ಲಿ ವೈದಿಕ ಧರ್ಮದ ವಿವರಗಳು ಬೌದ್ಧ ಧರ್ಮದ ನೆಲೆಯ ಮೇಲೆ ಒದಗಿಬಂದು, ಜಾನಪದ ಕಲ್ಪನೆಗಳನ್ನೂ ಅಳವಡಿಸಿಕೊಂಡು ಮಹಾಯಾನಪಂಥ ರೂಪ ತಳೆಯಿತಷ್ಟೆ. ಕ್ರಿಸ್ತಾಬ್ದ ಮೊದಲ ಶತಮಾನಗಳಲ್ಲಿ ನಡೆದುದು ಇದು. ಇದರ ಪ್ರಭಾವ ಕನ್ನಡ ನಾಡವರೆಗೂ ಬಂದು ತಾರಾಭಗವತಿ, ಲೋಕೇಶ್ವರ ಮೊದಲಾದ ದೇವತೆಗಳ ಆರಾಧನೆ ಆರಂಭವಾಯಿತು. ಮಹಾಯಾನದ ಉದಾರ ಮನೋವೃತ್ತಿಯಿಂದ ಈ ದೇವತಾಕೋಟಿಯಲ್ಲಿ ಜಿನ, ವಿಷ್ಣು, ಈಶ್ವರ ಇವರೂ ಸೇರಿಕೊಂಡರು. ವಿಷ್ಣುವಿನ ದಶಾವತಾರಗಳಲ್ಲಿ ಬುದ್ಧನು ಸೇರಿದುದು ಈ ಸಂದರ್ಭದಲ್ಲಿಯೇ.

ಜಗದ್ವಿಖ್ಯಾತರಾದ ಶಂಕರಾಚಾರ್ಯರ ಕಾಲವೂ ಪ್ರಾಚೀನ ಚಾಳುಕ್ಯರ ಕಾಲಕ್ಕೇ ಹೊಂದಿಕೊಳ್ಳುತ್ತದೆ ; ಕ್ರಿಸ್ತಾಬ್ದ ಆರು-ಏಳನೆಯ ಶತಮಾನ. ಆಚಾರ್ಯರು ಕೇರಳದವರು ; ಉತ್ತರ ಭಾರತದಲ್ಲೆಲ್ಲ ಸಂಚರಿಸಿ ಕಾಶ್ಮೀರ,



ಶೃಂಗೇರಿ ಮಠದಲ್ಲಿರುವ ಶ್ರೀ ಶಂಕರಾಚಾರ್ಯರವರ ಪುರಾತನ ಮೂರ್ತಿ

ಹಿಮಾಚಲ ಕೇದಾರದವರೆಗೂ ವೇದಾಂತಸಿದ್ಧಾಂತವನ್ನು ಪ್ರತಿಪಾದಿಸಿ ದಕ್ಷಿಣದ ಕಡೆ ಬಂದಾಗ ಅವರ ಒಲವನ್ನು ಸೆಳೆದದ್ದು ಶೃಂಗೇರಿ. ಕನ್ನಡ ನಾಡು ತಮ್ಮ ಚತುರ್ಧಾಮ ವ್ಯವಸ್ಥೆಯಲ್ಲಿ ದಕ್ಷಿಣಾಮ್ನಾಯವಾಗಬೇಕೆಂದು ಅವರು ಬಯಸಿದುದು ಆಕಸ್ಮಿಕವಲ್ಲ. ಅವರು ಪ್ರಚುರಪಡಿಸಿದ 'ಷಣ್ಮತ' ಗಳು 'ಪಂಚಾಯತನ' ಪೂಜೆ (ಎಂದರೆ ವಿಷ್ಣು, ಶಿವ, ಗಣಪತಿ, ಸೂರ್ಯ, ದೇವಿ ಇವರನ್ನು ಒಟ್ಟಿಗೆ ಪೂಜಿಸುವ ಪದ್ಧತಿ) ಇವು ಕನ್ನಡ ನಾಡಿನಲ್ಲಿ ಆಗಲೇ ಬೇರೂರಿದ್ದ ಸಮನ್ವಯ ಮನೋಧರ್ಮಕ್ಕೆ ಹೊರತಾಗಿರಲಿಲ್ಲ. ಹೀಗೆ ಶಂಕರಾಚಾರ್ಯರ ಪ್ರಭಾವ ಕನ್ನಡ ನಾಡಿನ ಮೇಲೆ ಮೂಡಿತು ; ಹಿಂದೂ ದೃಷ್ಟಿ ಸಿದ್ಧವಾಯಿತು.

ಶೃಂಗೇರಿ ವೈದಿಕಧರ್ಮದ ಕೇಂದ್ರವಾಗಿ ಪರಿಣಮಿಸಿತು. ಕಾಲಕ್ರಮ ದಲ್ಲಿ ಇಲ್ಲೊಂದು ಮಠ ಅಥವಾ ಗುರುಪೀಠ ಎದ್ದಿತು. ಮಲೆನಾಡಿನ ಒಳಗೆ ತುಂಗಾನದಿಯ ಎಡದಡದ ಮೇಲೆ, ನಿಸರ್ಗದ ನಡುವೆ, ಮೂಡಿ ಕೊಂಡಿರುವ ಈ ಧರ್ಮಪೀಠ ಮುಂದೆ ವಿಜಯನಗರದ ಅರಸರ ನೆರವಿನಿಂದ ಪ್ರಬಲವಾದ ಸಂಸ್ಥಾನವಾಯಿತು. ಸ್ಮಾರ್ತ ಸಂಪ್ರದಾಯಕ್ಕೆ ಉತ್ತೇಜನ ವನ್ನು ಒದಗಿಸಿದ ಈ ಮಠವನ್ನು ಸುರೇಶ್ವರ, ನಿತ್ಯಬೋಧಘನ, ಜ್ಞಾನಘನ, ಜ್ಞಾನೋತ್ತಮಶಿವ, ಜ್ಞಾನಗಿರಿ, ಸಿಂಹಗಿರಿ ಮೊದಲಾದ ಆಚಾರ್ಯರು ಬೆಳೆಸಿದರು. ಈ ಪರಂಪರೆಯಲ್ಲಿ ಬಂದ ವಿದ್ಯಾರಣ್ಯರು ಹಿಂದೂಧರ್ಮ ವನ್ನು ಕಷ್ಟಕರವಾದ ಒಂದು ಸಂದರ್ಭದಲ್ಲಿ ಕಾಪಾಡಿದರು. ಹಿಂದೂಧರ್ಮದ ದೃಷ್ಟಿಯನ್ನು ಸ್ಪಷ್ಟಪಡಿಸಿದವರು ಶಂಕರಾಚಾರ್ಯರಾದರೆ, ಮುಹಮ್ಮದೀ ಯರ ಉಪದ್ರವದಿಂದ ಹಿಂದೂಧರ್ಮವನ್ನು ರಕ್ಷಿಸಿದ ಕೀರ್ತಿ ವಿದ್ಯಾರಣ್ಯ ರಿಗೆ ಸಲ್ಲಬೇಕು.

ಶೃಂಗೇರಿಮಠ ಮೈದಳೆದನಂತರ ಅದಕ್ಕೆ ಸೇರಿದಂತೆ ಅಥವಾ ಅದರ ಮಾದರಿಯಲ್ಲಿ ಹಲವಾರು ಇತರ ಮಠಗಳೂ ಅಲ್ಲಲ್ಲಿ ಕಾಣಿಸಿಕೊಳ್ಳತೊಡಗಿ ದುವು. ಶಿವಗಂಗೆ, ಆವಣಿ, ಕೂಡಲಿ, ಹರಿಹರಪುರ, ಸಂಕೇಶ್ವರ, ಕರವೀರ, ಎಡನೀರು ಮೊದಲಾದೆಡೆಗಳಲ್ಲಿ ಸಿದ್ಧವಾದ ಧರ್ಮಪೀಠಗಳು ಶಂಕರಾ ಚಾರ್ಯರ ಬೋಧನೆಯನ್ನು ಕನ್ನಡನಾಡಿನಲ್ಲಿ ಪ್ರಸಾರಮಾಡಿದುವು. ಭಾರತ ದೇಶದ ಇತರ ಪ್ರಾಂತ್ಯಗಳಲ್ಲಿ ಪರಿಚಿತವಾಗಿದ್ದ, ಪ್ರಭಾವಶಾಲಿಯಾಗಿದ್ದ ಸ್ಮಾರ್ತ ಸಂಪ್ರದಾಯ ನಮ್ಮ ನಾಡಿನಲ್ಲಿಯೂ ಬೆಳೆಯುತ್ತ ಬಂದಿತು. ; ಇಡೀ ದೇಶಕ್ಕೂ ಈ ನಾಡಿಗೂ ನಂಟು ಹೀಗೆ ಮೂಡಿಕೊಂಡಿತು.

೫

ಧರ್ಮಸಮ್ಮೇಳನ

ನಾಡಿನ ಸಮನ್ವಯ ಮನೋಧರ್ಮ ರಾಷ್ಟ್ರಕೂಟ ರಾಜರ ಕಾಲದಲ್ಲಿ ಇನ್ನೂ ಬೆಳೆಯಿತು. ಬಾದಾಮಿ ಚಾಳುಕ್ಯರ ಸಾಮಂತರಾಗಿದ್ದು ಕೀರ್ತಿವರ್ಮನ ಕಾಲದಲ್ಲಿ ಸ್ವತಂತ್ರರಾಗಿ ಪ್ರಬಲರಾದ ಈ ರಾಜರು ವಿಷ್ಣುಭಕ್ತರು; ಅವರ ರಾಜಚಿಹ್ನೆ ವಿಷ್ಣುವಿನ ವಾಹನವಾದ ಗರುಡ ; ಅವರ ತಾಮ್ರಶಾಸನಗಳಲ್ಲಿ ಈ ಮುದ್ರೆ ಕಾಣಸಿಗುತ್ತದೆ. ಆದರೆ ಕೆಲವು ರಾಜರು ಶೈವಧರ್ಮಕ್ಕೂ ಒಲಿದಿದ್ದರು. ರಾಜರು ವೈಷ್ಣವರಾಗಿರಲಿ ಶೈವರಾಗಿರಲಿ, ರಾಷ್ಟ್ರಕೂಟ ಶಾಸನಗಳು ಸಾಮಾನ್ಯವಾಗಿ ಆರಂಭವಾಗುವುದು ಶಿವ–ವಿಷ್ಣು ಇಬ್ಬರನ್ನೂ ಸ್ತುತಿಸಿಯೇ. ಈ ವಂಶದ ಹೆಸರಾಂತ ರಾಜ ಅಮೋಘವರ್ಷ–ನೃಪತುಂಗ ಜೈನಧರ್ಮವನ್ನೂ ಮೆಚ್ಚಿಕೊಂಡು ಆ ಧರ್ಮವೂ ಅದರ ವಾಙ್ಮಯವೂ ಬೆಳೆಯುವಂತೆ ಮಾಡಿದ. ಇಷ್ಟಾದರೂ ಅವನ ಇಷ್ಟದೇವತೆ ಮಹಾಲಕ್ಷ್ಮಿ. ರಾಜ್ಯದಲ್ಲಿ ಒಮ್ಮೆ ಬರಗಾಲ ಬಂದಾಗ ಇವನು ಲಕ್ಷ್ಮಿಗೆ ಕಾಣಿಕೆಯಾಗಿ ತನ್ನ ಕೈಬೆರಳನ್ನೇ ಸಮರ್ಪಿಸಿದನಂತೆ ! ಬೌದ್ಧಧರ್ಮವನ್ನೂ ಅವನು ಕಡೆಗಾಣಿಸಲಿಲ್ಲ ; ಕನ್ಹೇರಿ, ಕಂಪಿಲ, ಡಂಬಳ, ಇಲ್ಲೆಲ್ಲ ಬೌದ್ಧವಿಹಾರಗಳಿಗೆ ದಾನಧರ್ಮಗಳನ್ನು ಮಾಡಿದ. ಎಲ್ಲೋರ (ಏಲಾಪುರ)ದ ಜಗದ್ವಿಖ್ಯಾತ ಕೈಲಾಸ ಮತ್ತಿತರ ದೇಗುಲಗಳನ್ನು ನೋಡಿದರೆ ರಾಷ್ಟ್ರಕೂಟರ ಸಮನ್ವಯದೃಷ್ಟಿ ಅರ್ಥವಾಗುತ್ತದೆ. ಅಲ್ಲಿ ಭಾಸವಾಗುವುದು ಧರ್ಮಸಮ್ಮೇಳನವೊಂದು ನಡೆದಂತೆ.

ದಿಟವಾಗಿ ನಾಡಿನಲ್ಲಿ ಧರ್ಮಸಮ್ಮೇಳನ ಕಾಲಕಾಲಕ್ಕೆ ನಡೆಯಿತು. ಜೈನಧರ್ಮ ರಾಜಾಶ್ರಯದಿಂದಲೂ ಜನರ ಒಲುಮೆಯಿಂದಲೂ ನಾಡಿನಲ್ಲೆಲ್ಲ ಹರಡಿದರೂ ಪ್ರಮುಖವಾಗಿ ಹಾಸನ ಜಿಲ್ಲೆ (ಶ್ರವಣಬೆಳ್ಗೊಳ), ಮೈಸೂರು ಜಿಲ್ಲೆಯ ಮಲೆಯೂರು (ಹೇಮಾದ್ರಿ), ಉತ್ತರ ಕನ್ನಡ ಜಿಲ್ಲೆಯ ಸೋದೆ, ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದ್ರೆ (ಕ್ಷೇಮವೇಣು), ಇವಲ್ಲದೆ ಹಾಡುವಳ್ಳಿ (ಸಂಗೀತಪುರ), ಬಿಳಿಗೆ (ಶ್ವೇತಪುರ) ಈ ಕಡೆ



ಕ್ರಿಸ್ತಾಬ್ದ ೯೮೩ರ ಸುಮಾರಿಗೆ ಚಾವುಂಡರಾಯನು ಶ್ರವಣಬೆಳ್ಗೊಳದಲ್ಲಿ ಕಡೆಸಿದ ಗೊಮ್ಮಟೇಶ್ವರನ ಮಹಾಮೂರ್ತಿ.

ಬೇರೂರಿತು. ಅಲ್ಲೆಲ್ಲ ಬಸದಿಗಳೂ, ದೇಗುಲಗಳೂ, ಮುನಿಗಳ ನಿಸಿದಿಗೆಗಳೂ ಮೂಡಿಕೊಂಡುವು. ಗಂಗರಾಜರ ದಂಡನಾಯಕನೂ ಮಂತ್ರಿಯೂ ಆಗಿದ್ದ ಚಾಮುಂಡರಾಯನು ಶ್ರವಣಬೆಳ್ಗೊಳದ ದೊಡ್ಡ ಬೆಟ್ಟದ ಮೇಲೆ ಕ್ರಿಸ್ತಾಬ್ದ ೯೮೩ರ ಸುಮಾರಿಗೆ ಕಡೆಯಿಸಿ ನಿಲ್ಲಿಸಿದ ಗೊಮ್ಮಟೇಶ್ವರನ ಮಹಾಮೂರ್ತಿಯನ್ನು ನೀವು ನೋಡಿರಬೇಕು. ಗೊಮ್ಮಟೇಶ್ವರ ಜೈನ ಸಂತರಲ್ಲಿ ಒಬ್ಬ ; ಆದಿ ತೀರ್ಥಂಕರ ಋಷಭನಾಥನ ಮಗ, ಭರತಚಕ್ರವರ್ತಿಯ ಸಹೋದರ ಬಾಹುಬಲಿಯೆಂಬುವನು ಈ ಸಂತನ ಪೂಜೆ ಕನ್ನಡ ನಾಡಿನಲ್ಲಿ ವಿಶಿಷ್ಟವಾದುದೆನ್ನಬಹುದು. ಶ್ರವಣಬೆಳ್ಗೊಳದ ಮೂರ್ತಿಯಿಂದ ಸ್ಫೂರ್ತಿ ಪಡೆದು ಮುಂದೆ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ, ವೇಣೂರುಗಳಲ್ಲಿಯೂ ಇವನ ಶಿಲಾಮೂರ್ತಿಗಳು ಕಡೆಯಲ್ಪಟ್ಟುವು. ಅದೇ ಕಾಲದಲ್ಲಿಯೇ ಚಿಕ್ಕ ಬೆಟ್ಟ. ದೊಡ್ಡ ಬೆಟ್ಟಗಳೆರಡರ ಮೇಲೂ ಹಲವಾರು ಸುಂದರ ಜೈನ ದೇಗುಲ ಗಳೂ ಸ್ಮಾರಕಗಳೂ ಎದ್ದುವು.

ಶ್ರವಣಬೆಳ್ಗೊಳದಲ್ಲಿ ಜೈನ ಮಠವೂ ಒಂದು ವ್ಯವಸ್ಥಿತವಾಯಿತು. ಚಾಮುಂಡರಾಯನ ಗುರುವೇ ಆಗಿದ್ದ ನೇಮಿಚಂದ್ರ ಸಿದ್ಧಾಂತಚಕ್ರವರ್ತಿ ಇದರ ಮೊದಲ ಗುರು. ಈ ಮಠದ ಗುರುಗಳು ಕುಂದಕುಂದಾನ್ವಯದವರು : ಮೂಲಸಂಘ ದೇಶೀಗಣ ಪುಸ್ತಕಗಚ್ಛವೆಂಬ ವಿಭಾಗದವರು. ಕ್ರಿಸ್ತಾಬ್ದ ೧೧೧೭ರಿಂದ ಈ ಮಠದ ಸ್ವಾಮಿಗಳಿಗೆಲ್ಲ ಚಾರುಕೀರ್ತಿ ಪಂಡಿತಾಚಾರ್ಯ ರೆಂಬ ಹೆಸರು ಬಂದಿತು. ಶ್ರವಣಬೆಳ್ಗೊಳದ ಈ ಮಠಕ್ಕೆ ಸೇರಿದಂತೆ ಮೊದ ಲಿಗೆ ಮಲೆಯೂರು ಮಠವೂ ಒಂದಿದ್ದಿತು ; ಮೊದಲನೆಯದು ಹಾಸನ ಪ್ರಾಂತ್ಯದ ಜನರ ಪ್ರಯೋಜನಕ್ಕಾದರೆ ಎರಡನೆಯದು ಮೈಸೂರು ಕಡೆಯ ಜನರಿಗಾಗಿ ಎಂದು. ಈ ಎರಡನೆಯ ಮಠದ ಸ್ವಾಮಿಗಳ ಹೆಸರಿನಲ್ಲಿ ಭಟ್ಟಾ ಕಳಂಕ ಎಂಬ ಬಿರುದು ಸೇರಿರುತ್ತಿದ್ದಿತು. ಶಿವಮೊಗ್ಗ ಜಿಲ್ಲೆಯ ಹುಂಚ (ಹೊಂಬುಚ್ಚ)ದಲ್ಲಿ ಕ್ರಿಸ್ತಾಬ್ದ ಎಂಟನೆಯ ಶತಮಾನದಿಂದ ಮಠವೊಂದಿದೆ. ಇಲ್ಲಿನ ಸ್ವಾಮಿಗಳೂ ಕುಂದಕುಂದಾನ್ವಯದವರೇ. ಆದರೆ ನಂದಿಸಂಘ ದವರು. ಇವಲ್ಲದೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಪ್ರಾಂತ್ಯಗಳಲ್ಲಿಯೂ ಇತರ ಕೆಲವು ಮಠಗಳಿವೆ. ಜೈನರಲ್ಲಿ ಎರಡು ಮುಖ್ಯವಾದ ಸಂಪ್ರದಾಯ ಗಳಿವೆಯಷ್ಟೆ, ದಿಗಂಬರ-ಶ್ವೇತಾಂಬರ ಎಂದು. ಕನ್ನಡ ನಾಡಿನಲ್ಲಿ ವಿಶೇಷ ವಾಗಿರುವುದು ದಿಗಂಬರ ಸಂಪ್ರದಾಯ. ಅಖಿಲ ಭಾರತ ಜೈನ ಸಾಹಿತ್ಯಕ್ಕೆ

ಕನ್ನಡ ನಾಡಿನ ಈ ಸಂಪ್ರದಾಯದ ಮುನಿಗಳ. ಲೇಖಕರ ಕೊಡುಗೆ ಅಪಾರವಾದುದು.

ಹೊಯ್ಸಳ ರಾಜರಲ್ಲಿ ಮೊದಲಿನವರೆಲ್ಲ ಜೈನರೇ. ಆದರೆ ಅವರಲ್ಲಿ ಸುಪ್ರಸಿದ್ಧನಾದ ಬಿಟ್ಟಿದೇವ (ಕ್ರಿ. ೧೧೦೮-೧೧೫೨) ಶ್ರೀ ವೈಷ್ಣವ ಧರ್ಮವನ್ನು ಮೆಚ್ಚಿಕೊಂಡು ವಿಷ್ಣುವರ್ಧನನಾದ. ಈ ಮತಪರಿವರ್ತನೆಗೆ ಕಾರಣ ರಾಮಾನುಜಾಚಾರ್ಯರು ಎಂದು ಹೇಳುತ್ತಾರೆ. ತಮಿಳು ನಾಡಿನಲ್ಲಿ ಕ್ರಿಸ್ತಾಬ್ದ ೧೦೧೭ರ ಸುಮಾರಿಗೆ ಹುಟ್ಟಿ, ಕಾಂಚೀಪುರದಲ್ಲಿ ಬೆಳೆದು, ಶ್ರೀರಂಗದಲ್ಲಿ ತಮ್ಮ ಹಿರಿಮೆಯನ್ನು ತೋರಿಸಿದ ಈ ಆಚಾರ್ಯರು ವಿಷ್ಣು ಭಕ್ತಿಯನ್ನು ಪ್ರತಿಪಾದಿಸಿ, 'ವಿಶಿಷ್ಟಾದ್ವೈತ'ವೆಂಬ ಹೆಸರಿನ ವೇದಾಂತ ದರ್ಶನವನ್ನು ಸ್ಪಷ್ಟಪಡಿಸಿದರು. ತಮಿಳು ನಾಡಿನಲ್ಲೆಲ್ಲ ಅವರ ಯಶಸ್ಸು ಹರಡಿತು ; ಅವರ ಅನುಯಾಯಿಗಳ ಸಂಖ್ಯೆಯೂ ಬೆಳೆಯಿತು.

ಆದರೆ ಶಿವಭಕ್ತಿಯನ್ನೇ ಮೆಚ್ಚಿಕೊಂಡಿದ್ದ ಚೋಳರಾಜ ಕುಲೋತ್ತುಂಗ ಇವರಿಗೂ ಇವರ ಅನುಯಾಯಿಗಳಿಗೂ ಕಿರುಕುಳ ಕೊಡಲಾರಂಭಿಸಿದಾಗ ಆಚಾರ್ಯರು ತಮಿಳು ನಾಡನ್ನು ಬಿಟ್ಟು ಕನ್ನಡ ನಾಡಿಗೆ ಬಂದರು, ನೀಲಗಿರಿಯ ಮಾರ್ಗವಾಗಿ ಬಂದ ಅವರು ಮೈಸೂರಿಗೆ ಪಶ್ಚಿಮದಲ್ಲಿ ನಲವತ್ತು ಮೈಲಿ ದೂರದ ವಹ್ನಿಪುಷ್ಕರಿಣಿ ಎಂಬಲ್ಲಿ ಸ್ವಲ್ಪ ಸಮಯ ನೆಲೆಸಿ. ಅಲ್ಲಿಂದ ಮಿರ್ಲೆ, ಸಾಲಿಗ್ರಾಮ ಮಾರ್ಗವಾಗಿ ತೊಣ್ಣೂರಿಗೆ ಬಂದರು. ಇಲ್ಲಿಯೇ ಅವರು ಹೊಯ್ಸಳ ರಾಜ ಬಿಟ್ಟಿದೇವನನ್ನು ಕಂಡು ಅವನನ್ನು ತಮ್ಮ ನಿಲುವಿಗೆ ಒಲಿಸಿಕೊಂಡರೆಂದು ಹೇಳುತ್ತಾರೆ. ಅವನ ನೆರವಿನಿಂದ, ಹತ್ತಿರದ ಮೇಲು ಕೋಟೆಯಲ್ಲಿ ಶ್ರೀ ವೈಷ್ಣವ ಸಮುದಾಯವನ್ನು ಸೇರಿಸಿದರು. ಅಲ್ಲಿ ಚೆಲುವ ನಾರಾಯಣನ ಗುಡಿಯೂ ಸಿದ್ಧವಾಯಿತು. ಅಲ್ಲಿಯೇ ಆಚಾರ್ಯರು ಸುಮಾರು ಇಪ್ಪತ್ತು ವರ್ಷಗಳ ಕಾಲ ನೆಲೆಸಿದ್ದರಂತೆ. ಈಗಲೂ ಕನ್ನಡ ನಾಡಿನ ಶ್ರೀವೈಷ್ಣವರಿಗೆ ಮೇಲುಕೋಟೆ ಪವಿತ್ರ ಕ್ಷೇತ್ರ. ಹೊಯ್ಸಳ ರಾಜರ ಆಶ್ರಯ ದಿಂದ ಅವರ ಆಡಳಿತ ಕೇಂದ್ರವಾಗಿದ್ದ ಹಾಸನ ಜಿಲ್ಲೆಯಲ್ಲಿಯೂ ಶ್ರೀವೈಷ್ಣವ ಧರ್ಮ ವಿಶೇಷವಾಗಿ ಹರಡಿತು, ಬಿಟ್ಟಿದೇವನು ವಿಷ್ಣುವರ್ಧನನಾದ ಮೇಲೆ ಬೇಲೂರಿನ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದ. ಅಷ್ಟು ಸುಂದರವಾದ ದೇಗುಲ ಜಗತ್ತಿನಲ್ಲಿಯೇ ಇನ್ನೊಂದು ಇರದು ಎಂದರೆ ಉತ್ಪ್ರೇಕ್ಷೆಯಲ್ಲ. ಇಲ್ಲಿಯೂ ದೇವರ ಪ್ರತಿಷ್ಠೆ ರಾಮಾನುಜಾಚಾರ್ಯರಿಂದಲೇ ನಡೆಯಿತೆಂದು ನಂಬಿಕೆಯಿದೆ. ಇದು ನಡೆದ ಕಾಲ ಕ್ರಿಸ್ತಾಬ್ದ ೧೧೧೭.



ತೊಂಡನೂರಿನಲ್ಲಿರುವ ಶ್ರೀ ರಾಮಾನುಜಾಚಾರ್ಯರ ಪ್ರತಿಮೆ.

ತಮಿಳು ನಾಡಿನಲ್ಲಿ ವೈಷ್ಣವದ್ವೇಷ ಕಡಮೆಯಾದಾಗ ರಾಮಾನುಜಾಚಾರ್ಯರು ತಿರುಪತಿ ಮಾರ್ಗವಾಗಿ ಮತ್ತೆ ತಮ್ಮ ನಾಡಿಗೆ ಹಿಂದಿರುಗಿ ಅಲ್ಲಿ ತಮ್ಮ ನೂರಿಪ್ಪತ್ತನೆಯ ವಯಸ್ಸಿನಲ್ಲಿ ತೀರಿಕೊಂಡರು.

ಅಂತೂ ನಿರಾಶ್ರಿತರಾಗಿ ಬಂದ ಈ ಹಿರಿಯರಿಗೆ ಆಶ್ರಯವನ್ನು ಕೊಟ್ಟು ಕನ್ನಡ ನಾಡು ಪುಣ್ಯವನ್ನು ಕಟ್ಟಿಕೊಂಡಿತು. ಇಡೀ ದಕ್ಷಿಣ ಭಾರತದ ಜನಪ್ರಿಯ ಧರ್ಮವೊಂದರಲ್ಲಿ ಪಾಲ್ಗೊಂಡಿತು; ನೆರೆಯ ನಾಡುಗಳೊಂದಿಗೆ ಚಿನ್ನದ ಬೆಸುಗೆಯೊಂದನ್ನು ಏರ್ಪಡಿಸಿಕೊಂಡಿತು. ಕನ್ನಡ ನಾಡಿನಲ್ಲಿ ಶ್ರೀವೈಷ್ಣವ ಧರ್ಮದವರು ಬಹುಸಂಖ್ಯೆಯಲ್ಲಿದ್ದಾರೆ. ಮೈಸೂರಿನಲ್ಲಿರುವ ಪರಕಾಲ

ಮತ ಈ ಧರ್ಮಕ್ಕೆ ಸೇರಿದ್ದು. ಮೈಸೂರು ಅರಸರಾಗಿದ್ದ ಒಡೆಯರಲ್ಲಿ ಹಲವರು ಶ್ರೀವೈಷ್ಣವ ದೀಕ್ಷೆಯನ್ನು ಪಡೆದಿದ್ದರು; ಅರಸರು ಇತರ ಧರ್ಮದವರಾದಾಗಲೂ ಪರಕಾಲ ಮಠದ ಸ್ವಾಮಿಗಳೇ ರಾಜಗುರುಗಳಾಗಿದ್ದರು.

ಶ್ರೀವೈಷ್ಣವ ಧರ್ಮದ ಸ್ವಾರಸ್ಯವೆಂದರೆ ಅದರ ಉದಾರ ನೀತಿ. ಜಾತಿ ಧರ್ಮಗಳಿಗಿಂತ ಪ್ರಪತ್ತಿ ಮುಖ್ಯ; ಭಗವಂತನ ಅನುಗ್ರಹವಾಗಲು ಶಿಳಿಯಾದ, ಆಳವಾದ ಭಕ್ತಿಯೇ ದಾರಿ. ಈ ಭಕ್ತಿಗೆ ಜಾತಿ, ಮತ, ಕುಲ ಇವು ಅಡ್ಡಿ ಬರುವುದಿಲ್ಲ. ಎಷ್ಟು ಕೀಳೆಂಬ ಕುಲದವನಾದರೂ ದೇವರನ್ನು ಒಲಿಸಿಕೊಳ್ಳಬಲ್ಲ, ದೇವರು ಒಲಿದನೆಂದರೆ ಅವನ ಕುಲ 'ಹಿರಿಯಕುಲ'ವೇ. ಈ ದೃಷ್ಟಿಯನ್ನು ರಾಮಾನುಜರೂ ಅವರ ಹಿಂದಿನವರಾದ ಆಳ್ವಾರರೂ ಬೆಳೆಸಿದರು. ಹೀಗಾಗಿ ಅವರ ಅನುಯಾಯಿಗಳಲ್ಲಿ ಬ್ರಾಹ್ಮಣರು ಮಾತ್ರವಲ್ಲದೆ ಇತರ ವರ್ಣಗಳವರೂ ಇದ್ದರು. ಹೊಲೆಯರೆಂದೂ ಕೀಳೆಂದೂ ಆ ಕಾಲದಲ್ಲಿ ಎಣಿಸಲ್ಪಟ್ಟಿದ್ದವರನ್ನೂ, ರಾಮಾನುಜರು ಹತ್ತಿರ ಕರೆದುಕೊಂಡು 'ತಿರುಕುಲತ್ತಾರ್' (ಎಂದರೆ, ಹಿರಿಯಕುಲದವರು) ಎಂದು ಕರೆದರು. ಮೇಲುಕೋಟೆಯಲ್ಲಿ ಅವರು ಗುಡಿಯನ್ನು ಏರ್ಪಡಿಸಿದಾಗ ಈ ಜನರು ಅವರಿಗೆ ತುಂಬ ನೆರವಾದರು. ಆದುದರಿಂದಲೇ, ದೇಶದ ಇತರೆಡೆ ಆ ಜನರಿಗೆ ದೇವಾಲಯ ಪ್ರವೇಶದ ಸೌಲಭ್ಯವಿಲ್ಲದಿದ್ದಾಗಲೂ, ಮೇಲುಕೋಟೆಯಲ್ಲಿ ಮಾತ್ರ ಅವರಿಗೆ ಪ್ರವೇಶ ಸೌಕರ್ಯವಿದ್ದಿತು. ಕನ್ನಡ ನಾಡಿನಲ್ಲಿ ರಾಮಾನುಜಾಚಾರ್ಯರ ಧರ್ಮವನ್ನು ಅನುಸರಿಸುವವರು ಹಲವು ಜಾತಿಯವರಿದ್ದಾರೆ, ಹಲವು ವೃತ್ತಿಗಳವರಿದ್ದಾರೆ. ಸಮಾಜಸುಧಾರಣೆಯ ಅಗತ್ಯವನ್ನು ನಮ್ಮ ಜನ ಆಗಲೇ ಅರಿತುಕೊಂಡರು; ಅದು ಆಗಬೇಕಾದರೆ ನೆಲೆ ಉದಾತ್ತವಾದುದಾಗಿರಬೇಕೆಂಬುದನ್ನೂ ಜನ ಮನದಟ್ಟುಮಾಡಿಕೊಂಡರು.

ಸರಿಸುಮಾರು ಇದೇ ಕಾಲದಲ್ಲಿ ಚೋಳರೂ ಕನ್ನಡ ನಾಡಿನ ಕೆಲವು ಭಾಗಗಳನ್ನು ವಶಪಡಿಸಿಕೊಂಡು ಆಳತೊಡಗಿದರು. ತಮಿಳು ನಾಡಿನಲ್ಲಿ ಇವರಿಗೆ ಇದ್ದ ಶೈವಛಲ ಕನ್ನಡ ನಾಡಿನಲ್ಲಿ ಇರಲಿಲ್ಲ; ನಾಡಿನ ಗುಣ ಅಂಥದು ಎಂದು ತೋರುತ್ತದೆ. ಇಲ್ಲಿಯೂ ಅವರು ಶಿವದೇವಾಲಯಗಳನ್ನೇನೋ ಕಟ್ಟಿಸಿದರು—ನಂದಿಯ ನಂಧೀಶ್ವರ, ತಿರುಮಕೂಡಲು ಅಗಸ್ತ್ಯೇಶ್ವರ, ಹಲಸೂರು ಸೋಮೇಶ್ವರ, ಮೊದಲಾದ ಗುಡಿಗಳೆಲ್ಲ ಅವರ ಕಾಲದವೇ. ಆದರೆ ಶ್ರೀರಂಗಪಟ್ಟಣದ ರಂಗನಾಥದೇವಾಲಯ, ದೊಡ್ಡಮಳೂರು ಅಪ್ರಮೇಯನ ಗುಡಿ, ಕೈವಾರದ ಅಮರನಾರಾಯಣನ ಗುಡಿ, ಮದ್ದೂರು

ನರಸಿಂಹ ದೇವಾಲಯ ಮೊದಲಾದ ವಿಷ್ಣುದೇವಾಲಯಗಳೂ ಅವರ ಕಾಲದವೇ. ಅವರ ಆಡಳಿತದ ಕಾಲ ಸುಮಾರು ಕ್ರಿಸ್ತಾಬ್ದ ೧೧೦೦ಳ ರಿಂದ ೧೧೧೬ ರವರೆಗೆ ಕಾಣುತ್ತದೆ. ಈ ದೀರ್ಘ ಅವಧಿಯಲ್ಲಿ ಅವರು ಇಲ್ಲಿ ಶೈವಧರ್ಮವನ್ನು ಹರಡಿದರೂ ವೈಷ್ಣವ ಧರ್ಮವನ್ನಾಗಲೀ ಜೈನ ಧರ್ಮವನ್ನಾಗಲೀ ವಿರೋಧಿಸಲಿಲ್ಲ.

ಇದೇ ನೀತಿಯನ್ನು ಕಲ್ಯಾಣದ ಚಾಳುಕ್ಯರೂ ಕಳಚೂರ್ಯರೂ ಮುಂದುವರೆಸಿಕೊಂಡುಹೋದರು. ಕಲ್ಯಾಣದ ಚಾಳುಕ್ಯರಲ್ಲಿ ಇಮ್ಮಡಿ ಜಯಸಿಂಹ (ಪಟ್ಟಕ್ಕೆ ಬಂದುದು ಕ್ರಿ. ೧೧೨೭ರಲ್ಲಿ) ನನ್ನು ಉಲ್ಲೇಖಿಸಬಹುದು, ಇವನು ಮೊದಲಿಗೆ ಜೈನನಾಗಿದ್ದವನು ಶೈವನಾದ, ಮುಂದೆ ಶರಣರ ಪ್ರಭಾವದಿಂದ ವೀರಶೈವನೂ ಆದ. ಆದರೆ ಜೈನ ಮತದ ವಿಚಾರವಾಗಿ ತುಂಬ ಆದರದಿಂದಲೇ ನಡೆದುಕೊಂಡ; ಕಡೆಗೆ ಕ್ಷೀಣವಾಗುತ್ತ ಇದ್ದ ಬೌದ್ಧ ಧರ್ಮವನ್ನೂ ಎತ್ತಿನಿಲ್ಲಿಸಲು ಪ್ರಯತ್ನಪಟ್ಟ. ಚಾಳುಕ್ಯರ ಸಾಮಂತರಾಗಿದ್ದ ಕದಂಬ ಕುಲದವರಲ್ಲಿ ನಾಗವರ್ಮನೆಂಬುವನು ಬನವಾಸಿ ದೇಶದಲ್ಲಿ ಜಿನ, ವಿಷ್ಣು, ಶಿವ, ಮುನಿಗಣ (ಎಂದರೆ ಬುದ್ಧ ಮತ್ತು ಅವನ ಪರಿವಾರ) ಇವರಿಗೆ ಆಲಯಗಳನ್ನೂ ಒಟ್ಟಿಗೆ ಕಟ್ಟಿಸಿದ (ಕ್ರಿ. ೧೦೪೮ರಲ್ಲಿ). ಬಳ್ಳಿಗಾವೆಯಲ್ಲಿರುತ್ತಿದ್ದ ಜಗದೇಕಮಲ್ಲೇಶ್ವರ ದೇವಾಲಯದೆದುರು 'ಗಂಡಭೇರುಂಡ' ಸ್ತಂಭವನ್ನು ನಿಲ್ಲಿಸಿದವನೂ ಇವನೇ. 'ಗಂಡಭೇರುಂಡ' ಧರ್ಮಸಂಗಮದ ಪ್ರತೀಕ ಎಂಬುದನ್ನು ಮರೆಯಬಾರದು.

ಚಾಳುಕ್ಯರ ಆಡಳಿತವನ್ನು ಕ್ರಿಸ್ತಾಬ್ದ ೧೧೫೭ರ ಸುಮಾರಿಗೆ ಕಿತ್ತೊಗೆದು ತಮ್ಮ ಮೇಲ್ಮೆಯನ್ನು ಮೂಡಿಸಿಕೊಂಡ ಕಳಚೂರ್ಯರು ಜೈನರಾದರೂ ಶೈವವೈಷ್ಣವ ಧರ್ಮಗಳನ್ನು ಬೆಳೆಸಿದರು. ಮೊದಲನೆಯ ದೊರೆ ಬಿಜ್ಜಳ ನಿಷ್ಠಾವಂತನಾದ ಜೈನ; ಆದರೆ ಅವನ ಪರವಾಗಿ ಬನವಾಸಿಯನ್ನು ಆಳುತ್ತಿದ್ದ ಕೇಶಿರಾಜ ಬಳ್ಳಿಗಾವೆಯಲ್ಲಿ ಕೇಶವದೇವಾಲಯವನ್ನು ಕಟ್ಟಬೇಕೆಂದಾಗ ಉತ್ಸಾಹದಿಂದ ಅವನಿಗೆ ನೆರವಾದ. ಬಳ್ಳಿಗಾವೆಯ ಕೇದಾರೇಶ್ವರ ಗುಡಿಗೂ ಅದನ್ನು ನೋಡಿಕೊಳ್ಳುತ್ತಿದ್ದ ಕೋಡಿಯ ಮಠಕ್ಕೂ ಬಿಜ್ಜಳರಾಜ ಹೋಗಿ ಅನೇಕ ದಾನಧರ್ಮಗಳನ್ನು ಮಾಡಿದ. ಈ ಕೋಡಿಯಮಠ ಕಾಳಾಮುಖವೆಂಬ ಶೈವಸಂಪ್ರದಾಯದ್ದು.

ಕಳಚೂರ್ಯ ಅರಸರ ಲಾಂಛನ ಬಸವ. ಇದು ಜೈನರ ಆದಿತೀರ್ಥಂಕರ ಋಷಭದೇವನ ಪ್ರತೀಕವೂ ಹೌದು, ಶಿವನ ವಾಹನವೆಂದು ಶಿವಪ್ರತೀಕವೂ

ಬಳ್ಳಿಗಾವೆಯ 'ಧರ್ಮಸಂಗಮದ ಪ್ರತೀಕ'ವಾದ ಗಂಡಭೇರುಂಡ

ಹೌದು. ವಿಚಿತ್ರಸುಯೋಗದಿಂದ ಬಿಜ್ಜಳರಾಜನ ಭಂಡಾರಿ ಮತ್ತು ಮಂತ್ರಿಗಳಾಗಿದ್ದ ಬಸವಣ್ಣನವರು (ಅಥವಾ ಬಸವೇಶ್ವರರು) ಧರ್ಮಪ್ರವರ್ತಕರಾದರು. ಕನ್ನಡ ನಾಡಿಗೆ ವಿಶಿಷ್ಟವಾದ ವೀರಶೈವಧರ್ಮ ಈ ರಾಜನ ಕಾಲದಲ್ಲಿಯೇ ಪ್ರಬಲವಾಗಿ ಜನಪ್ರಿಯವಾಯಿತು. ಕನ್ನಡ ನಾಡಿನಲ್ಲಿ ಚೋಳರು ಆಳುತ್ತಿದ್ದಾಗ ಶೈವಧರ್ಮ ಇಲ್ಲಿ ಹರಡಿತೆಂದು ಆಗಲೇ ತಿಳಿದೆವಷ್ಟೆ. ಇದು ಪಾಶುಪತಶೈವವೆಂಬ ಬಗೆಯದು. ಇದರ ಮೂಲಪುರುಷನಾದ ಲಕುಲೀಶನ ಹೆಸರು ಕನ್ನಡ ನಾಡಿನ ಹಲವು ಶಾಸನಗಳಲ್ಲಿ ಬರುತ್ತದೆ. ಕ್ರಿಸ್ತಾಬ್ದ ಎಂಟು–ಒಂಬತ್ತನೆಯ ಶತಮಾನದ ಸುಮಾರಿಗೆ ಕಾಶ್ಮೀರದಿಂದ ಕಾಳಾಮುಖವೆಂಬ ವೈದಿಕ ಶೈವಸಂಪ್ರದಾಯವೂ ಕನ್ನಡ ನಾಡಿಗೆ ಬಂದಿತು. ಬಳ್ಳಿಗಾವೆಯ ಕೇದಾರೇಶ್ವರ ಗುಡಿಯ ಕೋಡಿಯ ಮಠ ಈ ಸಂಪ್ರದಾಯದ್ದೆಂಬ ಪ್ರಸ್ತಾಪ ಈಗಲೇ ಬಂದಿತಷ್ಟೆ. ಬಳ್ಳಿಗಾವೆ, ಹಾನಗಲ್ಲು, ಅಬ್ಬಲೂರು, ಗದಗ, ಧಾರವಾಡ ಇಲ್ಲೆಲ್ಲ ಕಾಳಾಮುಖ ಪ್ರಭಾವವಿದ್ದಿತು.

ವೇದಮಾರ್ಗವನ್ನು ನಿರಾಕರಿಸದೆ, ಧರ್ಮಕ್ಕೆ ವಿಶಾಲವಾದ ನೆಲೆಯೊಂದನ್ನು ಒದಗಿಸಿಕೊಡುವ ಪ್ರಯತ್ನ ಕಾಳಾಮುಖರಿಂದ ನಡೆಯಿತು. ವರ್ಣಾಶ್ರಮಧರ್ಮವನ್ನು ಸ್ಥೂಲವಾಗಿ ಒಪ್ಪಿಕೊಂಡರೂ ತಮ್ಮ ಧರ್ಮವನ್ನು ಅವರು ಎಲ್ಲರಿಗೂ ಸಲ್ಲಿಸಿದರು; ಜಾತಿ–ಮತಗಳ ಮೇಲಾಟವನ್ನು ಅವರು ಪ್ರೋತ್ಸಾಹಿಸಲಿಲ್ಲ. ಶೈವಾಗಮಗಳು ಮತ್ತು ವೇದ ಎರಡನ್ನೂ ಅವರು ಸಮಾನವಾಗಿ ಕಾಣುತ್ತಿದ್ದರು; ತಮ್ಮ ಮಠಗಳಲ್ಲಿ ಶೈವಾಗಮಗಳೊಂದಿಗೆ ವೇದಾಭ್ಯಾಸವನ್ನೂ ಅಳವಡಿಸಿಕೊಂಡಿದ್ದರು. ಚೋಳರ ಪ್ರಭಾವದಿಂದ ತಮಿಳು ನಾಡಿನ 'ಅರವತ್ತು ಮೂವರು ಪುರಾತನ'ರೆಂಬ ಶಿವಭಕ್ತರ ಕಥೆಗಳೂ ಅವರ ಉಪದೇಶವೂ ಕನ್ನಡ ನಾಡಿನಲ್ಲಿ ನೆಲೆಯೂರಿತು. ಶಿವನ ದೃಷ್ಟಿಯಲ್ಲಿ ಜಾತಿಗಳ ಭೇದವಿರದು; ಹೃದಯಸಂಸ್ಕಾರವಾದರೆ ತೀರಿತು, ಸಾಮಾಜಿಕ ಸ್ಥಾನಮಾನಗಳೂ ವಿದ್ಯೆಯೂ ಅದಕ್ಕೆ ಸಮನಾಗಲಾರವು. ಹೀಗೆ ಲಾಕುಲಶೈವವೂ ಕಾಶ್ಮೀರದ ಕಾಳಾಮುಖಶೈವವೂ ತಮಿಳು ನಾಡಿನ ಶೈವವೂ ಕನ್ನಡ ನಾಡಿನ ವೀರಶೈವ ಧರ್ಮಕ್ಕೆ ಹಿನ್ನೆಲೆಯಾದುವು.

೯

ಯುಗಪ್ರವರ್ತನೆ

ಬಸವಣ್ಣನವರು ಬಿಜಾಪುರ ಜಿಲ್ಲೆಯ ಇಂಗಳೇಶ್ವರ ಬಾಗೇವಾಡಿಯಲ್ಲಿ ಕ್ರಿಸ್ತಾಬ್ದ ೧೧೩೪ರ ಸುಮಾರಿಗೆ ಹುಟ್ಟಿದರು. ಹುಟ್ಟಿದ ಕುಲ ಬ್ರಾಹ್ಮಣ ವಾದರೂ ಉಪನಯನ ಸಂಸ್ಕಾರಕ್ಕೆ ಸಮ್ಮತಿಸದೆ ಕಪ್ಪಡಿ ಸಂಗಮಕ್ಕೆ ಹೋಗಿ ಈಶ್ಯಾನ ಶಿವಗುರುವೆಂಬುವವರ ಬಳಿ ಗುರುಕುಲವಾಸಮಾಡಿ, ವಯಸ್ಸು ಬಂದನಂತರ ಮೊದಲು ಮಂಗಳವಾಡ ಅನಂತರ ಕಲ್ಯಾಣಗಳಲ್ಲಿ ಕಳಚೂರ್ಯರಾಜ ಬಿಜ್ಜಳನ ಪ್ರಧಾನಿಯೂ ಭಂಡಾರಿಯೂ ಆಗಿ ರಾಜ ಕಾರ್ಯವನ್ನು ನಿರ್ವಹಿಸುತ್ತಿರುವಾಗಲೇ ಶಿವಶರಣರ ಸಂಗದಲ್ಲಿ ಕಾಲ ಕಳೆಯುತ್ತ ತಮ್ಮ ಆಧ್ಯಾತ್ಮಿಕ ಔನ್ನತ್ಯವನ್ನೂ ಗಳಿಸಿಕೊಂಡರು. ಸಮಾಜ ಸುಧಾರಣೆಯ ಕೆಲಸವನ್ನು ಕೈಗೊಂಡಾಗ ರಾಜನಿಗೂ ಅವರಿಗೂ ವಿರಸ ವುಂಟಾಗಿ, ಅವರು ತಮ್ಮ ಲೌಕಿಕ ಅಧಿಕಾರವನ್ನು ಕಿತ್ತೊಗೆದು ಸಮಾಜ ಸುಧಾರಣೆ, ವೀರಶೈವಧರ್ಮಪ್ರಚಾರಗಳಲ್ಲಿ ಸಂಪೂರ್ಣವಾಗಿ ತೊಡಗಿದರು. ನಾಡಿನಲ್ಲಿ ಆಂದೋಳನವೊಂದನ್ನೇ ಒದಗಿಸಿ, ಹೊಸ ಯುಗವೊಂದಕ್ಕೆ ನಾಂದಿ ಯನ್ನು ಮಾಡಿ ೧೧೬೭ರ ಸುಮಾರಿಗೆ ತಮ್ಮ ಇಷ್ಟದೈವವಾದ ಕೂಡಲ ಸಂಗಮದೇವರಲ್ಲಿ ಮರೆಯಾದರು.

ಬಸವಣ್ಣನವರು ಬದುಕಿದ್ದ ಕಾಲದಲ್ಲಿ ವೀರಶೈವಧರ್ಮ ಆಗಲೇ ಹರಡುತ್ತಿದ್ದಿತು. ಕನ್ನಡ ನಾಡಿನ ಉತ್ತರ ಭಾಗದಲ್ಲಿ ಮರುಳಸಿದ್ಧ, ಆಂಧ್ರ ದಲ್ಲಿ ಮಲ್ಲಿಕಾರ್ಜುನ–ಪಂಡಿತಾರಾಧ್ಯ, ರೇವಣಸಿದ್ಧ, ಮಂಗಳವಾಡದ ಘನಲಿಂಗಿರುದ್ರಮುನಿ, ಸೊನ್ನಲಿಗೆಯ ಸಿದ್ಧರಾಮೇಶ್ವರ, ಆಲಂದೆಯ ಏಕಾಂತದ ರಾಮಯ್ಯ, ಕಾಶ್ಮೀರ ಕಡೆಯವರಾದ ಮೋಳಿಗೆ ಮಾರಯ್ಯ, ಕಲ್ಯಾಣದ ಮಡಿವಾಳ–ಮಾಚಯ್ಯ, ದೇವರ (ಅಥವಾ ಜೇಡರ) ದಾಸಿ ಮಯ್ಯ ಮೊದಲಾದವರು ಜನರಲ್ಲಿ ಸಮಾಜಸುಧಾರಣೆಯ ಮತ್ತು ಆಧ್ಯಾತ್ಮಿಕ ಕ್ರಾಂತಿಯ ಬೀಜಗಳನ್ನು ಬಿತ್ತುತ್ತಿದ್ದರು. ವ್ಯಕ್ತಿಯ ಬೆಳವಣಿಗೆ ಮತ್ತು ಸಮಾಜದ ಶುದ್ಧಿ ಎರಡೂ ಅಗತ್ಯಗಳನ್ನು ಒಟ್ಟಿಗೆ ಅಳವಡಿಸಿ ಕೊಂಡು ವೀರಶೈವ ಧರ್ಮ ಸಿದ್ಧವಾಯಿತು. ವಾತಾವರಣಕ್ಕೆ ಮೂರ್ತ ಸ್ವರೂಪ ಮತ್ತು ಸ್ಫೂರ್ತಿಕೇಂದ್ರ ಆಗಿ ನಿಂತವರು ಬಸವಣ್ಣನವರು.

ಬಾಗೇವಾಡಿ ದೇವಾಲಯದಲ್ಲಿರುವ ಶ್ರೀ ಬಸವೇಶ್ವರರ ಪ್ರತಿಮೆ

ಅವರ ವ್ಯಕ್ತಿತ್ವ ಎಲ್ಲರನ್ನೂ ಸೆಳೆಯಿತು ; ಅವರ ಬೋಧೆ ಎಲ್ಲ ಕಡೆಗಳಲ್ಲಿಯೂ ಹರಡಿತು. ಅವರ ಕಾಲದಲ್ಲಿ ಅವರ ಹಿರಿಮೆ ಎಷ್ಟು ಮೇಲೆ ಹೋಗಿದ್ದಿತೆಂದರೆ ಅವರು ಕಾಲವಾದ ಇನ್ನೂರು ವರ್ಷಗಳಲ್ಲಿಯೇ ಅವರನ್ನು ಕುರಿತು ಒಂದು ಪುರಾಣವೇ ಸಿದ್ಧವಾಯಿತು. ಭೀಮಕವಿ ಕ್ರಿಸ್ತಾಬ್ದ ೧೩೬೯ ರಲ್ಲಿ ಬರೆದ ಈ ಪುರಾಣ ತೆಲುಗಿನಲ್ಲಿಯೂ ಬಂದಿತು. ಅವರು ಕೈಗೊಂಡ ಕ್ರಾಂತಿಗೆ ನೆರವಾದ ಮಹಾಪುರುಷರಲ್ಲಿ ಅವರ ಸೋದರಳಿಯನೂ ಶಿಷ್ಯನೂ ಆದ ಚೆನ್ನಬಸವಣ್ಣ, ಅವರಿಗೆ ಹಿರಿಯನೂ ಅನುಭಾವಿಯೂ ಆಗಿದ್ದ

ಅಲ್ಲಮಪ್ರಭು (ಪ್ರಭುದೇವರು), ಅಕ್ಕಮಹಾದೇವಿ, ಸೊನ್ನಲಿಗೆ ಸಿದ್ಧರಾಮ, ಕಿನ್ನರಿ ಬೊಮ್ಮಯ್ಯ ಮೊದಲಾದವರು ಪ್ರಸಿದ್ಧರು. ಬಸವಣ್ಣನವರ ಕಡೆಗಾಲದಲ್ಲಿ ಆರಂಭವಾದ ಕ್ರಾಂತಿ ಶರಣಪರಂಪರೆಯಿಂದಾಗಿ ಮುಂದರಿಯಿತು ; ಹರಡಿತು. ಧರ್ಮ ಕೆಲವರಿಗೆಲ್ಲ, ಸಕಲರಿಗೆ ಎಂಬ ತತ್ತ್ವ ಸಫಲವಾಯಿತು.

ವೀರಶೈವ ಧರ್ಮದಲ್ಲಿ ಹೀಗೆ ಸಾಧಕರಾಗಿ, ನಾಯಕರಾಗಿ ದುಡಿದ ಸಂತರು 'ಶಿವಶರಣ'ರೆನ್ನಿಸಿಕೊಳ್ಳುತ್ತಾರೆ. ಪಾಶುಪತಧರ್ಮದ ಪತಿ–ಪಶು ಕಲ್ಪನೆಯನ್ನು ಉಳಿಸಿಕೊಂಡು, ಆದರೆ ಅವುಗಳ ನಡುವೆ ಭೇದವನ್ನು ಎಣಿಸದೆ ಅಷ್ಟಾವರಣ, ಷಟ್‌ಸ್ಥಲ ಮೊದಲಾದ ವಿಶಿಷ್ಟ ಪ್ರಕ್ರಿಯೆಗಳನ್ನು ಅಳವಡಿಸಿಕೊಂಡ ಈ ಧರ್ಮ ವಿಚಾರದಲ್ಲಿಯೂ ಆಚಾರದಲ್ಲಿಯೂ ಹೊಸ ಚೈತನ್ಯವನ್ನು ಮೂಡಿಸಿತು. ಮನುಷ್ಯನ ಆಧ್ಯಾತ್ಮಿಕ ಪ್ರಗತಿಯಲ್ಲಿ 'ಭಕ್ತಿ' ಮೊದಲ 'ಸ್ಥಲ'ವಾದರೆ 'ಐಕ್ಯ' ಕೊನೆಯ 'ಸ್ಥಲ'; ಎರಡರ ನಡುವೆ 'ಮಹೇಶ', 'ಪ್ರಸಾದ', 'ಪ್ರಾಣಲಿಂಗ', 'ಶರಣ' ಎಂಬ ನಾಲ್ಕು ಹಂತಗಳನ್ನೂ ಹೇಳುತ್ತಾರೆ. ಈ ಸಂಪ್ರದಾಯದಲ್ಲಿ ಗುರುವಿಗೆ ಹಿರಿಮೆ ಹೆಚ್ಚು, ಜಂಗಮನು ಶಿವನ ಅವತಾರವೆಂದೇ ನಂಬಿಕೆ. ವಿಭೂತಿ–ರುದ್ರಾಕ್ಷಗಳನ್ನು ಧರಿಸಿದ ಈ ಸಂಪ್ರದಾಯದವರು 'ನಮಃಶಿವಾಯ' ಎಂಬ ಪಂಚಾಕ್ಷರಜಪವನ್ನು ಮಾಡುತ್ತಾರೆ. ಇಷ್ಟಲಿಂಗವನ್ನು ಮೈಮೇಲೆ ಧರಿಸಿಕೊಳ್ಳುವುದು, ಅದನ್ನು ಪೂಜಿಸುವುದು ಇವರ ವೈಶಿಷ್ಟ್ಯ.

ಬದುಕಿನಲ್ಲಿ ಜಾತಿ, ಓದು ಇವು ಮುಖ್ಯವಲ್ಲ ; ಶೀಲವೇ ಮುಖ್ಯ. ಮನುಷ್ಯರೆಲ್ಲ ಒಂದೇ ಕುಲ ; 'ಹಾರುವ ಮೊದಲಾಗಿ ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನ್ನು ಒಂದೇ ಎಂಬೆ'. 'ಪೂಜೆಯ ಹೆಸರಿನಲ್ಲಿ ಪ್ರಾಣಿಹಿಂಸೆ ಸಲ್ಲದು'; 'ದಯೆಯಿಲ್ಲದ ಧರ್ಮ ಯಾವುದು?','ದೇವನೊಬ್ಬ ನಾಮ ಹಲವು'. 'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ'–ಬಸವೇಶ್ವರರ ಬೋಧೆ ಹೀಗೆ ಸಾಗಿತು. ಶಿವಶರಣರೆಲ್ಲ ಇದೇ ಬೋಧೆಯನ್ನು ಜನರಲ್ಲಿ ಹರಡಿದರು. ಬಸವಣ್ಣನವರು ತಮ್ಮ ಉಪದೇಶಕ್ಕೆ, ಶರಣರು ತಮ್ಮ ತತ್ತ್ವಪ್ರಚಾರಕ್ಕೆ ಬಳಸಿದ ಭಾಷೆ ಜನರ ಆಡುಮಾತಾಗಿದ್ದ ಕನ್ನಡವೇ ಆದುದರಿಂದ ಅವರು ಕೈಗೊಂಡ ಕ್ರಾಂತಿ ಬಿರುಸಿನಿಂದ ಸಾಗಿತು. ಬಸವಣ್ಣನವರೂ ಅವರ ಸಮಕಾಲೀನ ಶರಣರೂ, ಅವರ ಅನುಯಾಯಿಶರಣರೂ ತಂತಮ್ಮ ಉಪದೇಶಗಳನ್ನು ಕನ್ನಡದಲ್ಲಿಯೇ ತಂತಮ್ಮ ಅಂಕಿತಗಳನ್ನಿಟ್ಟು ರಚಿಸಿದರು.

ಇವಕ್ಕೆ 'ವಚನ'ಗಳೆಂದು ಹೆಸರು. 'ಆತ್ಮ ಆತ್ಮ ಮಥಿಸಿ ಅನುಭಾವ ಹುಟ್ಟಿತು ; ಅದು ವಚನಗಳ ಮೂಲಕ ಅಭಿವ್ಯಕ್ತವಾಯಿತು', ಎಂದು ಹೇಳುತ್ತಾರೆ. ಬಸವಣ್ಣನವರು 'ಕೂಡಲಸಂಗಮ'ನೆಂಬ ಅಂಕಿತದಿಂದ ರಚಿಸಿರುವ ವಚನಗಳು ಕನ್ನಡ ಸಾಹಿತ್ಯದ ಸುಂದರಸಂಪತ್ತು. ಹೀಗೆ ಧಾರ್ಮಿಕ ಸಾಹಿತ್ಯ ಕನ್ನಡದಲ್ಲಿ ಸಿದ್ಧವಾಯಿತು; ಆದರ ಹಿನ್ನೆಲೆಯಲ್ಲಿ ಅನುಭವವನ್ನು ಒಡಗಿಸಲು, ಒದಗಿದ ಅನುಭವಕ್ಕೆ ಆಧ್ಯಾತ್ಮದ ಚೌಕಟ್ಟನ್ನು ಮೂಡಿಸಲು 'ಅನುಭವಮಂಟಪ' ಎಂಬ ಸಂಸ್ಥೆಯೊಂದು ರೂಪಿತವಾಯಿತು.

ಅನುಭವಮಂಟಪದ ವಿಚಾರ ಹೇಳುವಾಗ ಅಲ್ಲಮಪ್ರಭುವನ್ನು ಮರೆಯುವ ಹಾಗಿಲ್ಲ. ಅನುಭವಮಂಟಪದ ಅಧ್ಯಕ್ಷನೆಂದು ಪ್ರಸಿದ್ಧನಾದ ಈ ಮಹಾಪುರುಷನು ಜಗತ್ತಿನ ಶ್ರೇಷ್ಠ ಸಾಧಕರ, ಅನುಭಾವಿಗಳ ಶ್ರೇಣಿಗೆ ಸೇರತಕ್ಕವನು, ಬಸವೇಶ್ವರರ ಸಮಕಾಲಿಕನಾದರೂ ಅವರಿಗಿಂತ ಹಿರಿಯ ; ಅವನ ಹಿರಿಮೆಯನ್ನು ಅವರೇ ಮನಸಾರೆ ಮೆಚ್ಚಿಕೊಂಡಿದ್ದರು. ಬಳ್ಳಿಗಾವೆಯಲ್ಲಿ ಹುಟ್ಟಿದ ಈತನು ಅನಿಮಿಷಯೋಗಿಯ ಬಳಿ ಉಪದೇಶಪಡೆದು ಯೋಗಿಯಾಗಿ, ಸಿದ್ಧನಾಗಿ, ಅನುಭಾವಮಾರ್ಗವನ್ನು ಜನರಲ್ಲಿ ಹರಡುತ್ತ ನಾಡಿನಲ್ಲೆಲ್ಲ ಅಲೆದಾಡಿ, ಕಡೆಗೆ ಕಲ್ಯಾಣದಲ್ಲಿ ನಡೆಯುತಿದ್ದ ಬಸವೇಶ್ವರರ ಕ್ರಾಂತಿಯಲ್ಲಿ ಪಾಲ್ಗೊಂಡು ಅವರಿಗೆ ನೆರವಾಗಿ, ಅನಂತರ ಶ್ರೀಶೈಲದ ಕಡೆ ನಡೆದು ಕದಳೀವನದಲ್ಲಿ ಮರೆಯಾದನು. ಇವನು 'ಗುಹೇಶ್ವರ' ಎಂಬ ಅಂಕಿತದಿಂದ ರಚಿಸಿರುವ ವಚನಗಳು ಆಧ್ಯಾತ್ಮಿಕ ಭಾವನೆಗಳ ಬುಗ್ಗೆ. ಕನ್ನಡ ನಾಡಿನ ಸುಪ್ರಸಿದ್ಧ ಶರಣೆಯರಲ್ಲಿ ಅಗ್ರಗಣ್ಯಳಾದ ಅಕ್ಕಮಹಾದೇವಿ ಅಲ್ಲಮನ ಶಿಷ್ಯೆಯೇ. ಈಕೆ 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತದಿಂದ ಸೊಗಸಾದ ವಚನಗಳನ್ನು ರಚಿಸಿದ್ದಾಳೆ. ಶ್ರೀಶೈಲದ ಮಲ್ಲಿಕಾರ್ಜುನನನ್ನೇ ವರಿಸಿದ ಈ ವಧು ಉಡತಡಿ (ಶಿವಮೊಗ್ಗ ಜಿಲ್ಲೆ) ಯಲ್ಲಿ ಹುಟ್ಟಿ, ಅಲ್ಲಮಪ್ರಭುವಿನಿಂದ ಆಧ್ಯಾತ್ಮಿಕ ದೀಕ್ಷೆ ಪಡೆದು, ಶ್ರೀಶೈಲದ ಕದಳೀವನದಲ್ಲಿಯೇ ಮರೆಯಾದಳು.

ಹೀಗೆ ಕನ್ನಡ ನಾಡಿನ ಧಾರ್ಮಿಕಸಂಪತ್ತನ್ನು ಹಿರಿದಾಗಿ ಹಿಗ್ಗಿಸಿದ ಶಿವಶರಣರ ಶ್ರಮದಿಂದ, ಅವರ ಪ್ರಭಾವದಿಂದ ಲಿಂಗಾಯತ ಮತ ಮೈದಳೆದು ನವಜನಾಂಗನಿರ್ಮಾಣಕ್ಕೆ ಕಾರಣವಾಯಿತು. ಬಸವೇಶ್ವರರ ಪ್ರಭಾವ ಕನ್ನಡ ನಾಡಿನ ಒಂದು ಭಾಗದಲ್ಲಿ ಬೇರೂರುತ್ತಿದ್ದಾಗಲೇ ಇನ್ನೊಂದು ಭಾಗದಲ್ಲಿ ಇನ್ನೊಬ್ಬರು ಮಹಾಪುರುಷರ ಪ್ರಭಾವ ಮೂಡಿಬಂದಿತು. ದಕ್ಷಿಣ ಕನ್ನಡ



ಪಾಜಕ ಕ್ಷೇತ್ರದಲ್ಲಿರುವ ಮಧ್ವಾಚಾರ್ಯರ ಶಿಲಾಮೂರ್ತಿ

ಜಿಲ್ಲೆಯ ಉಡುಪಿಯಲ್ಲಿ ಮಧ್ವಾಚಾರ್ಯರು ಕ್ರಿ. ೧೧೯೯ರಲ್ಲಿ ಹುಟ್ಟಿ, ಅಚ್ಯುತಪ್ರೇಕ್ಷರೆಂಬ ಯತಿಗಳ ಬಳಿ ವಿದ್ಯಾಭ್ಯಾಸವನ್ನೂ ಸನ್ಯಾಸವನ್ನೂ ಸ್ವೀಕರಿಸಿ, ದ್ವೈತದರ್ಶನವನ್ನು ದೃಢಪಡಿಸಲು ಗ್ರಂಥರಚನೆಯನ್ನೂ ದೇಶ ಸಂಚಾರವನ್ನೂ ಕೈಗೊಂಡು, ಭಾರತದಲ್ಲೆಲ್ಲ ತಮ್ಮ ನಿಲುವನ್ನು ಪ್ರತಿಪಾದಿಸಿ, ಉಡುಪಿಗೇ ಹಿಂದಿರುಗಿ ತಮ್ಮ ಎಂಬತ್ತನೆಯ ವಯಸ್ಸಿನಲ್ಲಿ ಮರೆಯಾದರು. ಭಾರತ ದೇಶದ ಮೂರು ಪ್ರಸಿದ್ಧ ಆಚಾರ್ಯರೆಂದರೆ ಶಂಕರಾಚಾರ್ಯರು (ಅದ್ವೈತದರ್ಶನ), ರಾಮಾನುಜಾಚಾರ್ಯರು (ವಿಶಿಷ್ಟಾದ್ವೈತದರ್ಶನ) ಮತ್ತು ಮಧ್ವಾಚಾರ್ಯರು (ದ್ವೈತದರ್ಶನ). ಇದರಲ್ಲಿ ಶಂಕರಾಚಾರ್ಯರು ಕೇರಳದವರು, ರಾಮಾನುಜಾಚಾರ್ಯರು ತಮಿಳು ನಾಡಿನವರು, ಮಧ್ವಾಚಾರ್ಯರು ಕನ್ನಡ ನಾಡಿನವರು. ದೇಶದ ದರ್ಶನವಾಙ್ಮಯಕ್ಕೆ ಕನ್ನಡ ನಾಡಿನ ಕೊಡುಗೆಯೆಂದರೆ ಮಧ್ವಾಚಾರ್ಯರು.

ಇವರು ವಿಷ್ಣು ಸರ್ವೋತ್ತಮನೆಂಬ ತತ್ತ್ವವನ್ನು ನಿರೂಪಿಸಿ, ಅದಕ್ಕೆ ತಾತ್ತ್ವಿಕ ನೆಲೆಯನ್ನು ಸಿದ್ಧಪಡಿಸಿದರು. ಇತರ ಇಬ್ಬರು ಆಚಾರ್ಯರಂತೆ ಇವರೂ ವೇದಾಂತ ಸೂತ್ರಗಳಿಗೆ ತಮ್ಮದೇ ಭಾಷ್ಯವನ್ನು ರಚಿಸಿದರು. ಈ ತಾತ್ತ್ವಿಕ ನಿಲುವನ್ನು ಅಂಗೀಕರಿಸಿದವರು 'ಮಾಧ್ವ'ರಾದರು ; ಇದೊಂದು ವಿಶಿಷ್ಟವಾದ ಜನಾಂಗವಾಯಿತು. ಈ ಜನಾಂಗದ ಅನುಕೂಲಕ್ಕೆಂದು ಮಾಧ್ವ ಮಠಗಳೂ ಮೊದಲಾದುವು. ಈ ಆಚಾರ್ಯರು ಉಡುಪಿಯಲ್ಲಿ ಸುಪ್ರಸಿದ್ಧ ವಾದ ಕೃಷ್ಣದೇವಾಲಯವನ್ನು ಕಟ್ಟಿಸಿ, ಅಲ್ಲಿ ಪೂಜಾವ್ಯವಸ್ಥೆಗಾಗಿ ಎಂಟು ಮಠಗಳನ್ನು ಏರ್ಪಡಿಸಿದರು. ಇವಲ್ಲದೆ ಕರ್ನಾಟಕದ ಇತರ ಭಾಗಗಳಲ್ಲಿ ಉತ್ತರಾದಿ, ಮುಳುಬಾಗಿಲು, ಸೋಸಲೆ, ನಂಜನಗೂಡು, ಮಜ್ಜಿಗೆಹಳ್ಳಿ, ಕೂಡಲಿ ಇಲ್ಲೆಲ್ಲ ಮಾಧ್ವಮಠಗಳಿವೆ. ಮಧ್ವಾಚಾರ್ಯರ ಪರಂಪರೆಯಲ್ಲಿ ಬಂದ ನರಹರಿತೀರ್ಥರು, ಪದ್ಮನಾಭತೀರ್ಥರು, ಶ್ರೀಪಾದರಾಜರು, ವ್ಯಾಸ ತೀರ್ಥರು, ವಾದಿರಾಜರು, ಜಯತೀರ್ಥರು, ರಾಘವೇಂದ್ರಸ್ವಾಮಿಗಳು ಮೊದಲಾದ ಸಂತರ ಪ್ರಭಾವದಿಂದ ಮಾಧ್ವಮತವೂ ಸ್ಪಷ್ಟವಾಯಿತು, ಮಾಧ್ವ ಜನಾಂಗವೂ ಊರ್ಜಿತವಾಯಿತು.

ಇವರಲ್ಲಿ ವ್ಯಾಸತೀರ್ಥರು ಮುಖ್ಯರಾದವರು. ಇವರು ವಿಜಯನಗರದ ಪ್ರಸಿದ್ಧ ದೊರೆ ಕೃಷ್ಣದೇವರಾಯ ಮಹಾರಾಯನ ಕಾಲದವರು (೧೪೪೭–೧೫೩೯) ; ಅವನಿಗೆ ಗುರುಗಳಾಗಿದ್ದವರು. ವಿಜಯನಗರ ಸಾಮ್ರಾಜ್ಯ ದೊಂದಿಗೆ ಇವರ ಸಂಬಂಧವಿದ್ದಿತು. ಇವರು ಮಹಾವಿದ್ವಾಂಸರು, ಯೋಗಿ ಗಳು, ಗ್ರಂಥಕಾರರು. ಪಂಡಿತರಾಗಿ 'ವ್ಯಾಸಕೂಟ'ವನ್ನು ಇವರು ತಾವೇ ನಡೆಸಿಕೊಂಡು ಬರುತ್ತಿದ್ದರು. ವ್ಯಾಸಕೂಟದಲ್ಲಿ ಸಂಸ್ಕೃತ ಭಾಷೆಯ ಶಾಸ್ತ್ರ ಗ್ರಂಥಗಳ ವಿಚಾರ, ವಿಮರ್ಶೆ, ಸಿದ್ಧಾಂತನಿರ್ಣಯ ಇವು ನಡೆಯುತ್ತಿದ್ದುವು. 'ದಾಸಕೂಟ'ದಲ್ಲಿ ಶಾಸ್ತ್ರವಿಚಾರಗಳನ್ನೂ ಭಗವದ್ಭಕ್ತಿಯನ್ನೂ ತಿಳಿಯಾದ ಕನ್ನಡದ ಹಾಡುಗಳಲ್ಲಿ ಮೂಡಿಸಿ ಜನರಿಗೆ ಮನದಟ್ಟಾಗುವಂತೆ ಮಾಡು ತ್ತಿದ್ದರು. ಇವರೇ ಸ್ವತಃ ಕನ್ನಡ ಹಾಡುಗಳನ್ನು ರಚಿಸಿದ್ದಾರೆ ; ಶಾಸ್ತ್ರಗ್ರಂಥ ಗಳನ್ನೂ ಸಂಸ್ಕೃತದಲ್ಲಿ ರಚಿಸಿದ್ದಾರೆ.

ಇವರ ಶಿಷ್ಯರಲ್ಲಿ ಪ್ರಸಿದ್ಧರಾದವರು ವಾದಿರಾಜರು, ವಿಜಯೀಂದ್ರ ತೀರ್ಥರು, ಪುರಂದರದಾಸರು, ಕನಕದಾಸರು, ವೈಕುಂಠದಾಸರು ಮೊದಲಾದ ವರು. ವಾದಿರಾಜರು ಉಡುಪಿಯವರು, ಮಧ್ವಾಚಾರ್ಯರು ಏರ್ಪಡಿಸಿದ ಅಷ್ಟಮಠಗಳಲ್ಲಿ ಒಂದಾದ ಸೋದೆಮಠದ ಸ್ವಾಮಿಗಳು ; ಅಲ್ಲಿ ಕೃಷ್ಣ

ಮಠಗಳ ಪರ್ಯಾಯ ವ್ಯವಸ್ಥೆಯನ್ನು ಮಾಡಿ ಎರಡನೆಯ ಮಧ್ವಾಚಾರ್ಯ ರಂತೆ ಮೆರೆದವರು. ಸಂಸ್ಕೃತ, ಕನ್ನಡ ಎರಡರಲ್ಲಿಯೂ ಕವಿಗಳು. ಪುರಂದರದಾಸರು (೧೪೮೪-೧೫೬೪) ಪುಣೆಯ ಕಡೆಯವರು. ಮೊದಲಿಗೆ ಚಿನಿವಾರರಾಗಿದ್ದು ತುಂಬ ಶ್ರೀಮಂತರಾಗಿದ್ದವರು. ನಡುಪ್ರಾಯದಲ್ಲಿ ವಿರಕ್ತಿ ತಳೆದು ಎಲ್ಲವನ್ನೂ ದಾನಮಾಡಿ ಹರಿದಾಸರಾಗಿ ವ್ಯಾಸತೀರ್ಥರಿಂದ ಅಂಕಿತ ಪಡೆದು ಲಕ್ಷಗಟ್ಟಳೆ ದೇವರನಾಮಗಳನ್ನೂ ಉಗಾಭೋಗ ಸುಳಾದಿಗಳನ್ನೂ ಸೊಗಸಾದ ಕನ್ನಡ ಶೈಲಿಯಲ್ಲಿ ರಚಿಸಿ ವಿಜಯನಗರದ ಹಂಪಿಯಲ್ಲಿ ತೀರಿ ಕೊಂಡರು. 'ಪುರಂದರವಿಠಲ' ಎಂಬ ಅಂಕಿತದಲ್ಲಿರುವ ಇವರ ಕೃತಿಗಳು ಜನಪ್ರಿಯವಾಗಿವೆ, ಪ್ರಸಿದ್ಧವಾಗಿವೆ. ಕನಕದಾಸರು ಧಾರವಾಡ ಜಿಲ್ಲೆಯ ಬಾಡದವರು, ಕುರುಬಜಾತಿಯಲ್ಲಿ ಹುಟ್ಟಿದವರು, ಸೇನಾಪತಿಯಾಗಿದ್ದವರು, ಕನಕನಾಯಕನೆಂದು ಹೆಸರಾಗಿದ್ದವರು. ಇವರೂ ವಿರಕ್ತರಾಗಿ ವ್ಯಾಸತೀರ್ಥರ ಬಳಿ ಶಿಷ್ಯರಾಗಿ ನೂರಾರು ಕನ್ನಡ ದೇವನಾಮಗಳನ್ನೂ, 'ಹರಿಭಕ್ತಿಸಾರ' 'ಮೋಹನತರಂಗಿಣಿ', 'ನಳಚರಿತ್ರೆ', 'ರಾಮಧ್ಯಾನಚರಿತ್ರೆ', ಮೊದಲಾದ ಕಾವ್ಯಗಳನ್ನೂ ರಚಿಸಿದ್ದಾರೆ. ವ್ಯಾಸತೀರ್ಥರಿಗೆ ತುಂಬ ಪ್ರಿಯರಾಗಿದ್ದವರು ಇವರು.

ಇವರ ಕಾಲವಾದನಂತರ ದಾಸಕೂಟ ಸ್ವಲ್ಪ ಹಿಂದೆ ಬಿದ್ದು. ಮತ್ತೆ ವಿಜಯದಾಸರ ಕಾಲದಲ್ಲಿ (೧೬೮೭-೧೭೫೫) ತಲೆಯೆತ್ತಿತು. ಮುಂದೆ ಜಗನ್ನಾಥದಾಸರು ('ಹರಿಕಥಾಮೃತಸಾರ'ವನ್ನು ಬರೆದರು, ೧೭೨೭–೧೮೦೯), ಗೋಪಾಲದಾಸರು (೧೭೨೨–೧೭೬೦), ಮೋಹನದಾಸರು, ಹೆಳವನಕಟ್ಟೆ ಗಿರಿಯಮ್ಮ, ಪ್ರಾಣೇಶದಾಸರು, ವ್ಯಾಸತತ್ತ್ವಜ್ಞರು, ಪ್ರಸನ್ನ ವೆಂಕಟದಾಸರು ಮೊದಲಾದವರು ದಾಸಕೂಟವನ್ನು ಎತ್ತಿನಿಲ್ಲಿಸಿದರು. ವೀರ ಶೈವಧರ್ಮದಲ್ಲಿ ಶಿವಶರಣರು ಮಾಡಿದ ಕೆಲಸವನ್ನು ವೈಷ್ಣವಧರ್ಮದಲ್ಲಿ ಹರಿದಾಸರು ಮಾಡಿದರು. ಇವರ ವಾಙ್ಮಯ ದಾಸಸಾಹಿತ್ಯವೆಂದು ಪ್ರಸಿದ್ಧ ವಾಗಿ ಜನತೆಯ ಸಂಸ್ಕಾರಕ್ಕೆ ತುಂಬ ನೆರವಾಗಿದೆ. ವ್ಯಾಸಕೂಟ – ದಾಸಕೂಟ ಗಳೆರಡಕ್ಕೂ ಆರಂಭಕಾಲದಲ್ಲಿ ನರಹರಿತೀರ್ಥರು ಸೇತುವೆಯಾಗಿದ್ದಂತೆಯೇ ಕಡೆಗಾಲದಲ್ಲಿ ರಾಘವೇಂದ್ರತೀರ್ಥರೂ ಇದ್ದರು. ಇವರು ಕುಂಭಕೋಣ ದವರಾದರೂ ನೈಜಾಮರಾಜ್ಯದ ಮಂಚಾಲೆಯೆಂಬಲ್ಲಿ ಸಶರೀರರಾಗಿಯೇ ಬೃಂದಾವನಸ್ಥರಾದರು; ಈಗ ಇದು ಮಂತ್ರಾಲಯವೆಂದು ಯಾತ್ರಾಸ್ಥಳ ವಾಗಿದೆ; ಅವರ ಬೃಂದಾವನದ ಪ್ರತೀಕಗಳು ಭಾರತದೇಶದಲ್ಲೆಲ್ಲ ಪೂಜೆ

ಗೊಳ್ಳುತ್ತಿವೆ. ಇವರ ತಪಃಶಕ್ತಿ, ವಿದ್ವತ್ತು, ಗ್ರಂಥರಚನಾಚಾತುರ್ಯ ಇವು ಇಂದಿಗೂ ಪ್ರಸಿದ್ಧವಾಗಿವೆ.

ಹರಿದಾಸಪರಂಪರೆಯಲ್ಲಿ ಮಾಧ್ವದರ್ಶನದ ನಿಲುವೇ ಮೂಲಭೂತವಾದರೂ, ಶಾಸ್ತ್ರವೇ ಆಧಾರವಾದರೂ ನೀತಿ ಮಾತ್ರ ಉದಾರವಾದುದು. ಕುಲಕುಲವೆಂದು ಬಡಿದಾಡಬೇಡಿ; ಮಡಿಮಡಿಯೆಂದು ಅಡಿಗಡಿ ಹಾರಬಾರದು; ಉದರವೈರಾಗ್ಯಕ್ಕೂ ನಿಜಭಕುತಿಗೂ ವೆತ್ಯಾಸವಿದೆ; ಬೂಟಕತನವನ್ನು ನೋಡಿ ಭ್ರಮಿಸದಿರಿ; ಹರಿ ಸುಲಭ–ಶಾಸ್ತ್ರಾರ್ಥಗಳಿಂದ ಉಪವಾಸವ್ರತಗಳಿಂದ ಅವನನ್ನು ನೋಡಲಾಗದು, ಒಳಗಣ್ಣಿನಿಂದ ನೋಡಬೇಕು; ನಾನು ಎಂಬುದು ಹೋದರೆ ಅದೇ ಸ್ವರ್ಗ. ಹೀಗೆ ಅವರು ಜನರ ಶೀಲಶುದ್ಧಿಗಾಗಿ, ದಿಟವಾದ ಆಧ್ಯಾತ್ಮಿಕ ಉನ್ನತಿಗಾಗಿ ಶ್ರಮಿಸಿದರು. ಅವರ ಪರಂಪರೆ ಇಂದಿಗೂ ಉಳಿದಿದೆ.

೭

ಹೊರಧರ್ಮಗಳು ಒಳಗೆ

ಮೇಲೆ ಹೇಳಿದುದೆಲ್ಲ ಬಹುಮಟ್ಟಿಗೆ ಕನ್ನಡ ನಾಡಿನಲ್ಲಿಯೇ ಮೈದಳೆದ ಅಥವಾ ಮಾರ್ಪಟ್ಟ ವಿವರಗಳು. ಇವಲ್ಲದೆ ನಾಡಿನ ಹೊರಗೆ ಹರಡುತ್ತಿದ್ದ ಕೆಲವು ವಿದೇಶೀ ಧರ್ಮಗಳೂ ಕನ್ನಡ ನಾಡಿನ ಧರ್ಮಗಳಲ್ಲಿ ಸೇರಿಹೋದುವು. ಇವುಗಳಲ್ಲಿ ಇಸ್ಲಾಂ ಮತ್ತು ಕ್ರೈಸ್ತಧರ್ಮಗಳು ಮುಖ್ಯವಾದುವು.

ಅರೇಬಿಯದಲ್ಲಿ ಕ್ರಿಸ್ತಾಬ್ದ ೬೨೨ರ ಸುಮಾರಿಗೆ ಪ್ರಬಲವಾದ ಇಸ್ಲಾಂ ಧರ್ಮವು ಭಾರತ ದೇಶವನ್ನು ೯೯೧ರ ವೇಳೆಗೆ ಮುಟ್ಟಿತು; ೧೧೯೧ರ ಸುಮಾರಿಗೆ ಅದರ ಪ್ರಭಾವ ಕಾಣಿಸಿಕೊಳ್ಳತೊಡಗಿತು. ೧೨೦೬ರಿಂದ ೧೫೨೬ರ ವರೆಗೆ ದೆಹಲಿಯಲ್ಲಿ ಸುಲ್ತಾನರ ಕಾರುಬಾರು ನಡೆಯುತ್ತಿದ್ದಾಗ ಈ ಧರ್ಮವು ದೇಶದ ಎಲ್ಲ ಪ್ರಾಂತ್ಯಗಳಿಗೂ ಹೋಯಿತು. ಕನ್ನಡನಾಡಿಗೆ ಅದು ಮೊಟ್ಟಮೊದಲಿಗೆ ಬಂದುದು ರಾಷ್ಟ್ರಕೂಟರ ಕಾಲದಲ್ಲಿ. ಅದಕ್ಕೂ ಮೊದಲೇ ಪಶ್ಚಿಮ ಸಮುದ್ರತೀರ ಮತ್ತು ಅರೇಬಿಯಗಳೊಂದಿಗೆ ವಾಣಿಜ್ಯ ಸಂಬಂಧ ಇದ್ದಿತಾಗಿ ನಾಡಿಗೆ ಇಸ್ಲಾಂ ಅಪರಿಚಿತವೇನಾಗಿರಲಿಲ್ಲ.

ಗುಲ್ಬರ್ಗಾದಲ್ಲಿ ೧೩೪೭ರ ಸುಮಾರಿಗೆ ಬಹಮನೀರಾಜ್ಯವು ಸ್ಥಾಪಿಸಲ್ಪಟ್ಟಾಗ ಇಸ್ಲಾಂಧರ್ಮ ಇಲ್ಲೇ ನೆಲೆಸತೊಡಗಿತು. ಸುಲ್ತಾನರು ಈ ನಾಡಿಗೆ ಪರ್ಶಿಯ, ಅರೇಬಿಯಗಳಿಂದಲೂ ಉತ್ತರ ಭಾರತದಿಂದಲೂ ಮುಸಲ್ಮಾನ

ರನ್ನು ಕರೆಸಿಕೊಂಡು ಅವರು ಇಲ್ಲಿ ನೆಲೆಸಲು ಅವಕಾಶಮಾಡಿಕೊಟ್ಟರು: ಇದೇ ಕಾಲದಲ್ಲಿ ಆಫ್ರಿಕದ ಸಿದ್ದಿಗಳೂ ಬಂದರು. ಹದಿನೈದನೆಯ ಶತಮಾನದ ಕಡೆಯ ಭಾಗದಲ್ಲಿ ಮತ್ತೆ ಮುಸಲ್ಮಾನರ ಮೇಲ್ಗೈ ಆದಾಗ ಇಸ್ಲಾಂ ಪ್ರಬಲ ವಾಯಿತು. ಬಿಜಾಪುರದ ಆದಿಲ್‌ಶಾಹಿ ಮತ್ತು ಗೋಲ್ಕೊಂಡದ ಕುತುಬ್ ಶಾಹಿ ಅರಸರ ಕಾಲ ಇದು. ೧೬೩೭ರಲ್ಲಿ ರಣದುಲ್ಲಾ ಖಾನ್ ಬಿಜಾಪುರವನ್ನು ಗೆದ್ದುದೂ ೧೬೮೭ರಲ್ಲಿ ಖಾಸಿಂ ಖಾನನು ಮೈಸೂರು ರಾಜ್ಯವನ್ನು ದಾಳಿ ಮಾಡಿ ಸಿರಾಪ್ರಾಂತ್ಯವನ್ನು ರಚಿಸಿದುದೂ ಹಿನ್ನೆಲೆಯಾದರೆ ೧೭೬೧ ರ ಸುಮಾರಿಗೆ ಹೈದರ್ ಆಲಿ ಪ್ರಬಲನಾದಾಗ ಮೈಸೂರು, ಬೀದನೂರು, ಚಿತ್ರದುರ್ಗ ಮತ್ತಿತರ ಪ್ರದೇಶಗಳಲ್ಲಿ ಸೈನ್ಯ ಮತ್ತು ಮತ್ತಿತರ ಆಡಳಿತ ವರ್ಗದಲ್ಲಿ ಮುಸಲ್ಮಾನರನ್ನು ಅಧಿಕ ಸಂಖ್ಯೆಯಲ್ಲಿ ಸೇರಿಸಿದುದು ಇಲ್ಲಿ ಇಸ್ಲಾಂಧರ್ಮ ಸ್ಪಷ್ಟವಾಗಿ ಬೇರೂರಲು ಕಾರಣವಾಯಿತು. ಅವನ ಮಗ ಟೀಪು ಸುಲ್ತಾನನಂತೂ ಇಸ್ಲಾಂಧರ್ಮವನ್ನು ಹರಡಲು ಬಹಳವಾಗಿ ಪ್ರಯತ್ನಿಸಿದ. ಹೈದರ ಮತ್ತು ಟೀಪು ಇವರು ಆಡಳಿತ ನಡೆಸುತ್ತಿದ್ದಾಗ ಶ್ರೀರಂಗಪಟ್ಟಣ, ಬಿಜಾಪುರ, ಗುಲ್ಬರ್ಗಾ ಇವು ಮುಸ್ಲಿಂಕೇಂದ್ರಗಳಾದುವು.

ರಾಜ್ಯದ ಮುಸಲ್ಮಾನರಲ್ಲಿ ಶೇಖ್, ಸೈಯಿದ್, ಪಠಾನ್, ಮುಘಲ್, ಲಬ್ಬೆ, ಪಿಂಜಾರಿ ಮೊದಲಾದ ವಿಭಾಗಗಳಿವೆ. ಶೇಖ್ ಮತ್ತು ಸೈಯಿದ್ ವಿಭಾಗಗಳು ಪ್ರವಾದಿ ಮಹಮ್ಮದರ ಮನೆತನದಿಂದಲೇ ನೇರವಾಗಿ ಬಂದವ ರೆಂದು ನಂಬಿಕೆಯಾದರೂ ಕಾಲಕ್ರಮದ ಸಂಕರ ಸೇರಿಬಂದಿದೆ. ಪಠಾನರು ಆಫ್ಗನ್ ಮೂಲದವರು: ಕುತ್ಬ್-ಉದ್-ದೀನನ ವಂಶೀಕರು. ಮುಘಲರು ತೈಮೂರ್-ಲಂಗನು ಭಾರತಕ್ಕೆ ಬಂದಾಗ ಅವನೊಂದಿಗೆ ಬಂದವರಂತೆ. ಲಬ್ಬೆ ಮತ್ತು ಮಾಪ್ಲಾ ಪಂಗಡಗಳು ಕ್ರಿಸ್ತಾಬ್ದ ಎಂಟು ಒಂಬತ್ತನೆಯ ಶತಮಾನಗಳಲ್ಲಿ ತಮ್ಮ ದೇಶದಿಂದ ಓಡಿ ಇಲ್ಲಿಗೆ ಬಂದ ಅರಬ್ ಮತ್ತು ಪರ್ಶಿಯನ್ ವ್ಯಾಪಾರಿಗಳ ಸಂತತಿಯವರು. ಟೀಪು ಸುಲ್ತಾನನ ಕಾಲದಲ್ಲಿ ಮಲಬಾರಿನಲ್ಲಿ ಮತಾಂತರಗೊಳಿಸಿದ ಹಿಂದೂಗಳೂ ಲಬ್ಬೆ, ಮಾಪ್ಲಾ ಎಂದು ಕರೆದುಕೊಳ್ಳುತ್ತಾರೆ. ಲಬ್ಬೆಯರು ತಮಿಳನ್ನೂ ಮಾಪ್ಲಾಗಳು ಮಲ ಯಾಳವನ್ನೂ ಆಡುವರು. ಇವರು ಸಾಹಸಿಗಳಾದ ವ್ಯಾಪಾರಿಗಳು. ಪಿಂಜಾ ರರು ಹತ್ತಿಯನ್ನು ಹೆಕ್ಕಿ, ಶುದ್ಧಿಮಾಡುವ ಜನ. ಇವರು ಆಫ್ಗನ್, ಮರಾಠಾ ಸಂಪರ್ಕದಿಂದ ಬಂದವರೆಂದು ಪ್ರತೀತಿಯಿದೆ.

ವಿಜಯನಗರದ ಕಡೆಗಾಲದ ಅರಸರೂ, ಕೆಳದಿ-ಇಕ್ಕೇರಿ ನಾಯಕರೂ,



ಆದಿಲ್‌ಶಾಹಿಯರು ಕಟ್ಟಿಸಿದ ಬಿಜಾಪುರದಲ್ಲಿರುವ ಜುಮ್ಮಾ ಮಸೀದಿ

ಮೈಸೂರು ಒಡೆಯರೂ ಹಿಂದೂ—ಇಸ್ಲಾಂ ಧರ್ಮಗಳೆರಡನ್ನೂ ಸಮವಾಗಿ ಪೋಷಿಸಿಕೊಂಡುಬಂದರು. ಕೆಲವೊಮ್ಮೆ ಇಸ್ಲಾಂಧರ್ಮ ಮತ್ತು ಹಿಂದೂ ಧರ್ಮಗಳು ವಿಚಿತ್ರವಾಗಿ ಕಲೆತುಬಂದುದೂ ಉಂಟು. ಬಾಬಾಬುಡನ್ ಬೆಟ್ಟ ಒಂದು ನಿದರ್ಶನ. ಕಡೂರು ಜಿಲ್ಲೆಯಲ್ಲಿರುವ ಈ ಪ್ರಸಿದ್ಧ ಬೆಟ್ಟ ಹಿಂದೂಗಳಿಗೆ ದತ್ತಾತ್ರೇಯಪೀಠವೆಂದೂ ಮುಸಲ್ಮಾನರಿಗೆ ದಾದಾಹಯಾತ್ ಮೀರ್ ಕಲಂದರ್ ಎಂಬ ಸಂತನ ಪೀಠವೆಂದೂ ಪವಿತ್ರಸ್ಥಳವಾಗಿದೆ. ಈ ಸಂತ ಇಲ್ಲಿಗೆ ಬಂದ ಕಾಲ ಕ್ರಿಸ್ತಾಬ್ದ ೧೦೦೫ ಎಂದು ಹೇಳುತ್ತಾರೆ. ಅವನ ಪರಂಪರೆಯಲ್ಲಿ ಬಂದ ಫಕೀರರು ಈಗಲೂ 'ಶ್ರೀ ದತ್ತಾತ್ರೇಯಸ್ವಾಮಿ ಬಾಬಾಬುಡನ್‌ಸ್ವಾಮಿ ಜಗದ್ಗುರು' ಎಂಬ ಬಿರುದನ್ನು ಬಳಸಿಕೊಳ್ಳುತ್ತಾರೆ. 'ಗೋಕುಲಾಷ್ಟಮಿಗೂ ಇಮಾಂಸಾಹೇಬರಿಗೂ ಸಂಬಂಧ' ವಿರದಿದ್ದರೂ ಮೊಹರಂ ಹಬ್ಬದಲ್ಲಿ ಹಿಂದುಗಳು ಪಾಲ್ಗೊಳ್ಳುವ ಪದ್ಧತಿ ಈ ಕಡೆ ಬೆಳೆದು ಬಂದಿದೆ. ಕೆಲವರು ಮುಸ್ಲಿಂ ಸಂತರ ಸಮಾಧಿಗಳಿಗೆ (ದರ್ಗಾಗಳಿಗೆ) ಹಿಂದುಗಳು ನಡೆದುಕೊಳ್ಳುವುದೂ ಇದೆ. ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿಯ ಸನ್ನಿಧಿಯಲ್ಲಿ 'ಬೀಬಿ ನಾಚ್ಚಿಯಾರ್' ಎಂಬ ಮುಸಲ್ಮಾನ ರಾಜಪುತ್ರಿಗೆ ಪೂಜೆನಡೆಯುವ ವಿವರವೂ ಸ್ವಾರಸ್ಯವಲ್ಲವೇ ? ರಾಮಾನುಜಾಚಾರ್ಯರ ಕಾಲದಿಂದ ಇದು ನಡೆದುಬಂದಿತೆಂದು ಹೇಳುತ್ತಾರೆ.

ಹೀಗೆಯೇ ಕನ್ನಡ ನಾಡಿಗೂ ಕ್ರೈಸ್ತಧರ್ಮಕ್ಕೂ ಸಂಬಂಧ ಪ್ರಾಚೀನ ವಾದುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹನ್ನೆರಡನೆಯ ಶತಮಾನದ ಸುಮಾರಿಗೇ ಚರ್ಚುಗಳಿದ್ದುವೆಂದು ತಿಳಿದುಬರುತ್ತದೆ. ಫ್ರ ಜೋರ್ಡನ್ ಕಟಲನಸ್ ದಿ ಸೆವೆರೋ ಎಂಬ ಪಾದ್ರಿಯ ನೇತೃತ್ವದಲ್ಲಿ ಡಾಮಿನಿಕನ್ ಕ್ರೈಸ್ತರು ೧೩೨೫ ರಲ್ಲಿ ಮೈಸೂರು ರಾಜ್ಯದಲ್ಲಿ ತಮ್ಮ ಮತಪ್ರಸಾರದ ಪ್ರಯತ್ನವನ್ನು ಮೊಟ್ಟಮೊದಲಿಗೆ ಮಾಡಿದರು. ೧೪೪೫ ರಲ್ಲಿ ವಿಜಯನಗ ರದ ದಿವಾನರಲ್ಲಿ ಒಬ್ಬನು ಕ್ರೈಸ್ತನಾಗಿದ್ದನೆಂಬ ಉಲ್ಲೇಖವಿದೆ. ೧೩೩೫ ರಷ್ಟು ಹಿಂದೆಯೇ ಬೈಬಲನ್ನು ಕನ್ನಡದಲ್ಲಿ ತರುವ ಪ್ರಯತ್ನ ನಡೆಯಿತು ; ಬೈಬಲ್ ಬೋಧನೆಯೂ ಆರಂಭವಾಯಿತು. ೧೫೪೨ ರಲ್ಲಿ ಲೊಯೋಲಾದ ಸಂತ ಇಗ್ನೇಶಿಯಸ್‌ನ ಶಿಷ್ಯ ಸಂತ ಫ್ರಾನ್ಸಿಸ್ ಕ್ಸೇವಿಯರ್ ಕನ್ನಡ ನಾಡಿ ನಲ್ಲೆಲ್ಲ ಸಂಚರಿಸಿ ಕ್ರೈಸ್ತಮತಕ್ಕೆ ಜನತೆಯಿಂದ ಪ್ರೋತ್ಸಾಹಗಳಿಸಲು ಪ್ರಯತ್ನಪಟ್ಟನೆಂದು ಪ್ರತೀತಿಯಿದೆ.

ಗೋವೆಯಲ್ಲಿದ್ದ ಪೋರ್ತುಗೀಸ್ ಕ್ರೈಸ್ತರ ವಸತಿಗೂ ಬಿಜಾಪುರ



ಬೆಂಗಳೂರಿನ ಅಲಸೂರಿನಲ್ಲಿರುವ ಟ್ರಿನಿಟಿ ಚರ್ಚ್

ಸಂಸ್ಥಾನಕ್ಕೂ ಸಂಬಂಧವಿದ್ದು ೧೫೮೭ ರ ಸುಮಾರಿಗೆ ಗೋವೆಯ ಕ್ರೈಸ್ತರು ಕನ್ನಡ ನಾಡಿನ ಮೇಲೆ ಪ್ರಬಲವಾದ ಪ್ರಭಾವ ಬೀರತೊಡಗಿದರು. ಸತ್ಯಮಂಗಲದ ಕಡೆಯಿಂದ ಬಂದ ಪೋರ್ತುಗೀಸ್ ಜೆಸ್ಯೂಟ್ ಪಂಗಡದ ಪಾದ್ರಿಗಳು 'ಕನ್ನಡ ಮಿಶನ್' ಎಂಬ ಧಾರ್ಮಿಕ ಸಂಸ್ಥೆಯೊಂದನ್ನು ಆರಂಭಿಸಿದರು. ೧೭೦೪ ರ ಸುಮಾರಿಗೆ ಈ ಮಿಶನ್ ತುಂಬ ಪ್ರಬಲವಾದ ಸಂಸ್ಥೆಯಾಗಿ ಶ್ರೀರಂಗಪಟ್ಟಣ 'ರೋಂ ಸಂನ್ಯಾಸಿ' ಗಳ ಕೇಂದ್ರವಾಯಿತು. ಹೈದರ್ ಆಲಿ ಮಂಗಳೂರಿನಿಂದ ಒಂಬತ್ತು ಸಾವಿರ ಕೆಥೋಲಿಕ್ ಕ್ರೈಸ್ತರನ್ನು ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡನಂತೆ. ಕನ್ನಡ ನಾಡಿನ ಕೆಳಭಾಗದಲ್ಲಿ ಎಂದರೆ ಮೈಸೂರುಕಡೆ ಈ 'ಕನ್ನಡ ಮಿಶನ್' (ಪೋರ್ತುಗೀಸರದ್ದು)

ಕೆಲಸವಮಾಡುತ್ತಿರುವಾಗ ಮೇಲುಭಾಗದಲ್ಲಿ ಎಂದರೆ ಬೆಂಗಳೂರು, ಕೋಲಾರ ಗಳಲ್ಲಿ 'ತೆಲುಗು ಮಿಶನ್' (ಫ್ರೆಂಚರದ್ದು) ಸಕ್ರಿಯವಾಗಿದ್ದಿತು.

ಕೆಳದಿ ಸಂಸ್ಥಾನದಲ್ಲಿ ಮೂವತ್ತುಸಾವಿರ ಕ್ರೈಸ್ತರಿದ್ದುದು ತಿಳಿದುಬರುತ್ತದೆ. ವಿಜಯನಗರದ ಅರಸರು ಕ್ರೈಸ್ತಧರ್ಮವನ್ನು ಪ್ರೋತ್ಸಾಹಿಸಿದ ನಿದರ್ಶನಗಳಿವೆ; ಇದಕ್ಕೆ ಪೋರ್ಚುಗೀಸರ ಮೈತ್ರಿ ಉದ್ದೇಶವೆಂದು ತೋರುತ್ತದೆ. ಹೈದರ್ ಅಲಿ, ಟೀಪು ಸುಲ್ತಾನ್ ಮತ್ತಿತರ ಮುಸ್ಲಿಂ ನಾಯಕರೂ ಇದೇ ಉದ್ದೇಶದಿಂದ ಕ್ರೈಸ್ತರನ್ನು ಒಲಿಸಿಕೊಳ್ಳಲು ಯತ್ನಿಸಿದರು. ಭಾರತದಲ್ಲಿ ಬ್ರಿಟಿಷರ ಅಧಿಕಾರ ಬೇರೂರಿದ ತರುಣದಲ್ಲಿ ಕ್ರೈಸ್ತಧರ್ಮ ಗುರುಗಳು ಇಡೀ ನಾಡಿನಲ್ಲೆಲ್ಲ ತಮ್ಮ ಮತಧರ್ಮವನ್ನು ಪ್ರಸರಿಸುವ ಆಸೆಯನ್ನಿರಿಸಿಕೊಂಡಿದ್ದರು. ಫ್ರೆಂಚ್ ರಕ್ತಕ್ರಾಂತಿಯು ಮೊದಲಾಗುವ ಮೊದಲು, ೧೭೯೨ರಲ್ಲಿ, ಪ್ಯಾರಿಸ್ ನಗರದಿಂದ ಹೊರಟ ಅಬೆ ಡ್ಯೂ ಬಾಯ್ ಎಂಬ ಸುಪ್ರಸಿದ್ಧ ಪಾದ್ರಿ ಕನ್ನಡ ನಾಡಿಗೆ ಬಂದು ಶ್ರೀರಂಗಪಟ್ಟಣವನ್ನು ತನ್ನ ಕಾರ್ಯಕ್ಷೇತ್ರವಾಗಿ ಆರಿಸಿಕೊಂಡು, ಇಲ್ಲಿಯೇ ಇಪ್ಪತ್ತೆರಡು ವರ್ಷಗಳ ಕಾಲ ನೆಲಸಿ ಮೈಸೂರು ನಗರದಲ್ಲಿ ಚರ್ಚ್ ಒಂದನ್ನು ಕಟ್ಟಿಸಿದ. ವಿದೇಶೀ ಕ್ರೈಸ್ತಪಾದ್ರಿಗಳು ಇಲ್ಲಿ ವಿದ್ಯಾಲಯಗಳು, ಅನಾಥಾಲಯಗಳು, ಆಸ್ಪತ್ರೆಗಳು, ರಕ್ಷಣಾಶಿಬಿರಗಳು, ಉದ್ಯೋಗಕೇಂದ್ರಗಳು ಮೊದಲಾದುವನ್ನು ಏರ್ಪಡಿಸಿ ಜನರ ಆಸಕ್ತಿಯನ್ನೂ ಅಭಿಮಾನವನ್ನೂ ಗಳಿಸಿದರು.

ಇದು ರೋಮನ್ ಕೆಥೋಲಿಕ್ ಪಂಗಡದವರ ಕಥೆಯಾದರೆ ಪ್ರೊಟೆಸ್ಟೆಂಟ್ ಪಂಗಡದ ಕ್ರೈಸ್ತರು ಬಳ್ಳಾರಿಯಲ್ಲಿ ೧೮೨೦ರ ಸುಮಾರಿಗೆ 'ಲಂಡನ್ ಮಿಶನ್' ಎಂಬ ಸಂಸ್ಥೆಯನ್ನು ಆರಂಭಿಸಿ ಬೆಂಗಳೂರು—ಮೈಸೂರುವರೆಗೆ ತಮ್ಮ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡರು. ಇವರು ಪ್ರಮುಖವಾಗಿ ಶಿಕ್ಷಣಸಂಸ್ಥೆಗಳನ್ನು ಆರಂಭಿಸಿದರು. ಕನ್ನಡ ನಾಡಿನಲ್ಲಿ ವೆಸ್ಲೆಯನ್ ಮಿಶನ್ ಕೆಲಸಮಾಡತೊಡಗಿದರು ೧೮೨೧ರಲ್ಲಿ; ಅವರು ಬೆಂಗಳೂರಿನಲ್ಲಿ ನೆಲೆಸಿದ ವರ್ಷ ೧೮೩೫, ಇಲ್ಲಿ ಇವರು ೧೮೪೦ರಲ್ಲಿ ಮುದ್ರಣಶಾಲೆಯೊಂದನ್ನು ಆರಂಭಿಸಿದರು. ಕನ್ನಡ ಲಿಪಿಯನ್ನು ಅಚ್ಚಿಗೆ ಸಂಸ್ಕರಣ ಮಾಡುವ ಮಹತ್ಕಾರ್ಯವನ್ನು ರೆವರೆಂಡ್ ಗ್ಯಾರೆಟ್ ಮತ್ತು ಟಿ. ಹಾಡ್ಸನ್ ಎಂಬಿಬ್ಬರು ಕ್ರೈಸ್ತ ಕಾರ್ಯಕರ್ತರು ಕೈಗೊಂಡರು. ಕನ್ನಡದ ಈ ಹೊಸಲಿಪಿಯಲ್ಲಿ 'ಭಗವದ್ಗೀತೆ'ಯ ಕನ್ನಡ ಅನುವಾದ ಈ ಮುದ್ರಣಾಲಯದಲ್ಲಿ ಅಚ್ಚಾಯಿತು! ಈ ಮಿಶನ್ ಹಲವೆಡೆ ಆಸ್ಪತ್ರೆಗಳನ್ನು ಏರ್ಪಡಿಸಿ ಜನರ ಕೃತಜ್ಞತೆಗೆ ಪಾತ್ರವಾಯಿತು. ಇವಲ್ಲದೆ ಮಂಗಳೂರಿನ

ಬಾಸೆಲ್ ಮಿಶನ್ ಮೊದಲಾದ ಕ್ರೈಸ್ತಸಂಸ್ಥೆಗಳು ನಾಡಿನ ಪ್ರಗತಿಗೂ ಕ್ರೈಸ್ತ ಧರ್ಮದ ಪ್ರಚಾರಕ್ಕೂ ತುಂಬ ನೆರವಾದವು.

ಹೀಗೆ ಕನ್ನಡ ನಾಡಿನಲ್ಲಿ ಇತಿಹಾಸದುದ್ದಕ್ಕೂ ಧರ್ಮದ ನೆಲೆ ವಿಶಾಲವಾಗುತ್ತ, ಆಳವಾಗುತ್ತ ಬರುತ್ತಿದೆ. ಬೇರೆ ಬೇರೆ ಕಾರಣಗಳಿಂದ ಬೇರೆ ಬೇರೆ ಕಾಲಗಳಲ್ಲಿ ಇಲ್ಲಿಗೆ ಆಗಂತುಕವಾಗಿ ಬಂದ ಧಾರ್ಮಿಕ ಪಂಥಗಳು ಇಲ್ಲಿಯೇ ಬೇರೂರಿ ಇಲ್ಲಿನವೇ ಆಗಿ ಕನ್ನಡ ನಾಡಿನ ಸಮನ್ವಯಗುಣವನ್ನು ಚೆನ್ನಾಗಿ ಅಳವಡಿಸಿಕೊಂಡಿವೆ. ನಾಡಿನವೇ ಆದ ಹಲವು ಧಾರ್ಮಿಕ ವಿವರಗಳೊಂದಿಗೆ ಭಾರತದ ಎಲ್ಲ ಧರ್ಮಗಳೂ (ಜೈನ, ಬೌದ್ಧ, ವೈದಿಕ), ಪ್ರಮುಖಪಂಥಗಳೂ (ಪಾಶುಪತ, ಕಾಳಾಮುಖ, ಭಾಗವತ, ಪಾಂಚರಾತ್ರ ಮೊದಲಾಗಿ) ಇಲ್ಲಿ ಬೆಳೆದುಬಂದಿವೆ; ಹೊರದೇಶಗಳ ಇಸ್ಲಾಂ, ಕ್ರೈಸ್ತ, ಪಾರ್ಸಿ ಮೊದಲಾದ ಧರ್ಮಗಳು ಕೂಡ ಇಲ್ಲಿ ಮನೆಮಾಡಿಕೊಂಡಿವೆ. ಕನ್ನಡ ನಾಡಿನಲ್ಲಿ ಇರುವಷ್ಟು ಜೈನಬಸದಿಗಳೂ, ಬೌದ್ಧವಿಹಾರಗಳೂ, ಮಸೀದಿಗಳೂ, ಚರ್ಚ್‌ಗಳೂ, ಪಾರ್ಸಿ ಮೌನದೇಗುಲಗಳೂ, ಸೀಖರ ಗುರುದ್ವಾರಗಳೂ ಪ್ರಾಯಶಃ ಬೇರೊಂದು ಪ್ರಾಂತ್ಯದಲ್ಲಿಲ್ಲ; ಶೈವ, ವೈಷ್ಣವ; ದೇವೀ ದೇವಾಲಯಗಳಂತೂ ಲಕ್ಷಾಂತರ ಇವೆ. ಇಷ್ಟೊಂದು ಪಂಥಗಳಿದ್ದರೂ ಪಂಥಪ್ರತೀಕಗಳಿದ್ದರೂ ಇತಿಹಾಸವನ್ನು ಪರಿಶೀಲಿಸಿದರೆ ಹೊಡೆದಾಟ, ಬಡಿದಾಟ ತೀರ ಕಡಿಮೆ; ಇಲ್ಲವೇ ಇಲ್ಲವೆಂದರೂ ಸಲ್ಲುವುದು ಇದಕ್ಕೆ ರಾಜರು, ನಾಯಕರು ನಡೆಸಿಕೊಂಡ ರೀತಿ ಒಂದು ಕಾರಣವಾದರೆ, ಜನರ ಗುಣ ಇನ್ನೊಂದು ಕಾರಣ ಎನ್ನಬಹುದು.

ಮುಖ್ಯ ಧರ್ಮಗಳಿರಲಿ, ಕಾಲಕಾಲಕ್ಕೆ ಇತರೆಡೆ ಮೈದಳೆದ ಸಣ್ಣ ಪುಟ್ಟ ಧಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳೂ ಇಲ್ಲಿನ ಜನರ ಆಸಕ್ತಿಯನ್ನೂ ಔದಾರ್ಯವನ್ನೂ ಪಡೆದುಕೊಂಡಿದ್ದಾರೆ. ಆರ್ಯಸಮಾಜ, ಬ್ರಾಹ್ಮಸಮಾಜ, ರಾಮಕೃಷ್ಣ ಮಿಶನ್, ಥಿಯಸಾಫಿಕಲ್ ಸೊಸೈಟಿ, ಬಹಾಯ್ ಗೋಷ್ಠಿ, ರಮಣಾಶ್ರಮ, ಬಿಯಾಸ್‌ನ ರಾಧಾಸ್ವಾಮಿ ಸತ್ಸಂಗ, ಶಿರದಿ ಸಾಯಿಬಾಬಾ ಮತ್ತು ಪುಟ್ಟಪರ್ತಿ ಸತ್ಯಸಾಯಿಬಾಬಾ ಸಂಸ್ಥೆಗಳು, ಕಬೀರ ಪಂಥ, ಗೋರಖಪಂಥ, ಮೆಹರ್‌ಬಾಬಾ ಕೇಂದ್ರ, ಅರವಿಂದ ಪ್ರತಿಷ್ಠಾನ, ಶಿವಬಾಲಯೋಗಿ ಆಶ್ರಮ, ಹೀಗೆ ನೂರಾರು ಪಂಥಗಳು ಕನ್ನಡ ನಾಡಿನಲ್ಲಿ ಬೆಳೆದಿವೆ. ವಿದ್ಯಾವಂತರೂ ಬುದ್ಧಿವಂತರೂ ಅವುಗಳಲ್ಲಿ ಆಸಕ್ತಿವಹಿಸಿ ಕನ್ನಡದಲ್ಲಿರುವ ಧಾರ್ಮಿಕ ಸಾಹಿತ್ಯ ವೈವಿಧ್ಯಪೂರ್ಣವಾಗಿದೆ, ವಿಸ್ತೃತವಾಗಿದೆ, ಉಜ್ಜ್ವಲವಾಗಿದೆ. ಇದರಿಂದಾಗಿ ಮಹಾಜನರ ಹೃದಯಸಂಸ್ಕಾರ ಗಂಭೀರವಾಗಿದೆ, ಉದಾತ್ತವಾಗಿದೆ. ಧರ್ಮದ ಪ್ರಯೋಜನ ಇದೇತಾನೆ ?



ಪ್ರಥಮ ವಿಶ್ವ ಕನ್ನಡ ಸಮ್ಮೇಳನ
1982